ಸಂಪುಟ : 8 ಸಂಚಿಕೆ : 264 ಪುಟ : 4 ಬೆಲೆ : 3.00 ಬುಧವಾರ ನವ್ಹಂಬರ್ 29, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 264 Pages : 4 Price : 3.00 Wednesday November 29, 2023 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

## ಇಂದಿನ ನೀರು ಪೂರೈಕೆ ಮಾಹಿತಿ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಬೆಟಗೇರಿ ಅವಳಿ ನಗರದಲ್ಲಿ ನವೆಂಬರ್ 29 ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು.

ಸ್ಥಳಗಳ ವಿವರ : ವಾರ್ಡ್ ನಂ. 22 ವಿಜಯನಗರ ಸ್ಕೂಲ್, ವಾರ್ಡ್ ನಂ. 16 ಡಿಸಿ ಮಿಲ್ ರೋಡ್, ಹೊಂಬಳ ನಾಕಾ, ಜನತಾ ಕಾಲೋನಿ ಶೌಚಾಲಯದ ಹಿಂದಿನ ಭಾಗ, ಅಡ್ಡೆದ ಓಣಿ. ವಾರ್ಡ್ ನಂ. 28 ಸೋಲಾಪಟ್ಟಿ ಲೈನ್, ಕೃಷ್ಣ ಟ್ಯೂಷನ್ ಲೈನ್, ಪಂಚಾಕ್ಷರಿ ನಗರ 6ನೇ ಕ್ರಾಸ್, ಗವಾಯಿಗಳ ಆಶ್ರಮ ಮುಂದಿನ ಭಾಗ, ವಾರ್ಡ್ ನಂ. 29 ಹೊಸ ಹುಡ್ಕೋ ಲೈನ್, ವಾರ್ಡ್ ನಂ. 11,12 ಕರಿಯಮ್ಮ ಕಲ್ಲು, ಇರಾನಿ ಕಾಲೋನಿ, ಹನುಮಂತ ದೇವರ ಗುಡಿ ಲೈನ್, ಗಾರ್ಡನ್ ಸುತ್ತ ಮುತ್ತಲಿನ ಲೈನಗಳು.

ವಾರ್ಡ್ ನಂ. 8, 9, 10 ಹೆಲ್ತ್ ಕ್ಯಾಂಪ್, ಕಲಬುರ್ಗಿ ಓಣಿ, ಗಡಿಗಿಯವರ ಲೈನ್, ಕಂಗೂರಿ ಓಣಿ, ಮಲ್ಲಯ್ಯನ ಕಟ್ಟಿ, ಹಿರೇಮಠದ ಓಣಿ, ಮದ್ಲಿಯವರ ಓಣಿ, ಮಜ್ಜಿಗಿ ಓಣಿ, ಶಿರಹಟ್ಟಿ ಓಣಿ, ಪೊಲೀಸ್ ಕ್ವಾರ್ಟರ್ಸ್, ನವೋದಯದ ಆಫೀಸ್ ಲೈನ್, ಚಿದಂಬರ ಆಶ್ರಮ, ಅಶೋಕ ರೋಡ ಭಾಗ -1,2,3, ಗರಡಿಮನಿ ಸಂಧಿ, ನೀಲಕಂಠ ಗದಗಿನವರ ಸಂಧಿ ಕೆಲವು ಉಳಿದ ಭಾಗಗಳು, ಮಸೂತಿ ಲೈನ್.

ತಾಂತ್ರಿಕವಾಗಿ ನೀರು ಪೂರೈಕೆಯಲ್ಲಿ ಒಂದು ವೇಳೆ ಅಡತಡೆಯಾದಲ್ಲಿ ಸಾರ್ವಜನಿಕರು ನಗರಸಭೆಯೊಂದಿಗೆ ಸಹಕರಿಸಬೇಕೆಂದು ಗದಗ ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ರೈತರ ಬಾಂಧವರ ಗಮನಕ್ಕೆ

■ ವಿಜಯಸಾಕ್ಷಿ ಸುದ್ದಿ, ಮುಳಗುಂದ

ಗದಗ ಹೋಬಳಿ ವ್ಯಾಪ್ತಿಯ ರೈತ ಬಾಂಧವರು ಸರಕಾರದ ಸೌಲಭ್ಯಗಳನ್ನು ಹಾಗೂ ಸಹಾಯಧನ ಪಡೆಯಲು ತಮಗೆ ಸಂಬಂಧಪಟ್ಟ ಎಲ್ಲಾ ಜಮಿನುಗಳ ಎಫ್‌ಐಡಿ ಕಡ್ಡಾಯವಾಗಿ ಜೋಡಣೆ ಮಾಡಿಸಬೇಕು. ಎಫ್‌ಐಡಿಯನ್ನು ರೈತ ಸಂಪರ್ಕ ಕೇಂದ್ರ ಹುಲಕೋಟಿ, ಗದಗ ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಕಂದಾಯ ಇಲಾಖೆ ಗದಗ, ಗ್ರಾಮ ಒನ್, ಸಿ.ಎಸ್.ಸಿ ಸೆಂಟರ್‌ಗಳಿಗೆ ಭೇಟಿ ನೀಡಿ ಮಾಡಿಸಬಹುದಾಗಿದೆ. ಎಫ್.ಐ.ಡಿ ಮಾಡಿಸಲು ಆಧಾರ್ ಕಾರ್ಡ್, ಬ್ಯಾಂಕ್ ಪಾಸ್‌ಬುಕ್, ಪಹಣಿ(ಹೊಲದ ಉತಾರ) ದೂರವಾಣಿ ಸಂಖ್ಯೆ, ಭಾವಚಿತ್ರ, ಎಸ್‌ಸಿ/ಎಸ್‌ಟಿ ಆಗಿದ್ದಲ್ಲಿ ಜಾತಿ ಪ್ರಮಾಣ ಪತ್ರ ತೆಗೆದುಕೊಂಡು ಕೂಡಲೇ ಎಫ್‌ಐಡಿ ಮಾಡಿಸಬೇಕು ಎಂದು ಹುಲಕೋಟಿ ಸಹಾಯಕ ಕೃಷಿ ಅಧಿಕಾರಿ ರಾಜೇಶ್ವರಿ ಚಿನಿವಾಲರ ಪ್រಕಟಣೆಗೆ ತಿಳಿಸಿದ್ದಾರೆ.

### ರೋಣ ತಾಲೂಕು ಕಚೇರಿಗೆ ಭೇಟಿ ನೀಡಿದ ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್

# ಸಾರ್ವಜನಿಕರ ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸಿ

■ ವಿಜಯಸಾಕ್ಷಿ ಸುದ್ದಿ, ಗದಗ

ಸಾರ್ವಜನಿಕರು ತಮ್ಮ ದೈನಂದಿನ ಕೆಲಸ-ಕಾರ್ಯಗಳಿಗಾಗಿ ಸರ್ಕಾರಿ ಕಚೇರಿಗಳಿಗೆ ಬರುತ್ತಾರೆ. ಅವರನ್ನು ಸತಾಯಿಸದೇ ಕಾಲಮಿತಿಯೊಳಗೆ ಸಾರ್ವಜನಿಕರ ಸಮಸ್ಯೆಗಳಿಗೆ ಸ್ಪಂದಿಸುವ ಮೂಲಕ ಕಾನೂನಾತ್ಮಕವಾಗಿ ಅವರ ಕೆಲಸಗಳನ್ನು ಆದ್ಯತೆಯ ಮೇರೆಗೆ ಮಾಡಿಕೊಡಬೇಕೆಂದು ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್. ಸೂಚಿಸಿದರು.

ಜಿಲ್ಲೆಯ ರೋಣ ತಾಲೂಕಿನ ತಹಸೀಲ್ದಾರ ಕಾರ್ಯಾಲಯದಲ್ಲಿ ಮಂಗಳವಾರ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿ ಅವರು ಮಾತನಾಡಿದರು.

ಸಾರ್ವಜನಿಕರ ಕೆಲಸಗಳನ್ನು ಕಾಲಮಿತಿಯೊಳಗೆ ಮಾಡಿಕೊಡಬೇಕು. ವಿಳಂಬ ನೀತಿ ತೋರುವ ಅಧಿಕಾರಿ, ಸಿಬ್ಬಂದಿಗಳ ಮೇಲೆ ಶಿಸ್ತು ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಅಧಿಕಾರಿಗಳು ಕಾನೂನು ಚೌಕಟ್ಟಿನಲ್ಲಿ ಕಾರ್ಯನಿರ್ವಹಿಸಬೇಕು. ಜನಸಾಮಾನ್ಯರ ನೋವು-ನಲಿವುಗಳಿಗೆ ಸ್ಪಂದಿಸುವ ಮೂಲಕ ಸರ್ಕಾರ ನಿಮ್ಮೊಂದಿಗಿದೆ ಎಂಬ ಭಾವನೆ ಸಾರ್ವಜನಿಕರಲ್ಲಿ ಮೂಡುವಂತೆ ಸರ್ಕಾರಿ ಅಧಿಕಾರಿಗಳ ಹಾಗೂ ಸಿಬ್ಬಂದಿಗಳ ವರ್ತನೆ ಇರಬೇಕು. ಕಚೇರಿ ಕಾರ್ಯಗಳಿಗಾಗಿ ಆಗಮಿಸುವ ಸಾರ್ವಜನಿಕರೊಂದಿಗೆ ಸಹಾನುಭೂತಿಯಿಂದ ವ್ಯವಹರಿಸಬೇಕು.



ರೋಣ ತಹಸೀಲ್ದಾರ ಕಚೇರಿಯಲ್ಲಿ ಸಾರ್ವಜನಿಕರು ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್. ಅವರಿಗೆ ಅಹವಾಲುಗಳನ್ನು ಸಲ್ಲಿಸುವ ಮೂಲಕ ತಮ್ಮ ಸಮಸ್ಯೆಗಳನ್ನು ಹೇಳಿಕೊಂಡರು. ಸಲ್ಲಿಕೆಯಾದ ಅಹವಾಲುಗಳಲ್ಲಿ ಪ್ರಮುಖವಾಗಿ ಸಾಮಾಜಿಕ ಭದ್ರತೆ ಯೋಜನೆಯಡಿ ಮಾಸಾಶನ ಮಂಜೂರಾತಿ, ವಸತಿ, ಸೂರು ಕಲ್ಪಿಸುವ ಬಗ್ಗೆ ಹಾಗೂ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಕುರಿತಂತೆ ಅಹವಾಲುಗಳನ್ನು ಸಾರ್ವಜನಿಕರು ಸಲ್ಲಿಸಿದರು.

ಸಾಧ್ಯವಾದಷ್ಟು ತಕ್ಷಣ ಅವರ ಕೆಲಸಗಳನ್ನು ಮಾಡಿಕೊಡಬೇಕೆಂದು ತಿಳಿಸಿದರು.

ಸಾಮಾಜಿಕ ಭದ್ರತಾ ಯೋಜನೆಗಳಡಿ ಸ್ವೀಕೃತವಾದ ಅರ್ಜಿಗಳನ್ನು ಪರಿಶೀಲಿಸಿ, ಅರ್ಹರಿಗೆ ಆದ್ಯತೆ ಮೇರೆಗೆ ಮಂಜೂರಾತಿ ನೀಡಬೇಕು. ವೃದ್ಧರು, ಅಶಕ್ತರು, ವಿಕಲಚೇತನರು ಸೇರಿದಂತೆ ಯಾರನ್ನೂ ಸಹ ವಿನಾಕಾರಣ ಕಚೇರಿಗೆ ಅಲೆದಾಡಿಸಬಾರದು. ಸರ್ಕಾರದ ಮಹಾತ್ವಾಕಾಂಕ್ಷಿ ಯೋಜನೆಗಳಾದ ಅನ್ನಭಾಗ್ಯ, ಗೃಹಲಕ್ಷ್ಮೀ, ಗೃಹ ಜ್ಯೋತಿ, ಶಕ್ತಿ ಯೋಜನೆಗಳನ್ನು ಅರ್ಹರೆಲ್ಲರೂ ಸೌಲಭ್ಯ ಪಡೆಯಬೇಕು. ಈ ನಿಟ್ಟಿನಲ್ಲಿ ಆಡಳಿತ ವರ್ಗ ಹೆಚ್ಚು ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸಬೇಕೆಂದು ಹೇಳಿದರು.

ಈ ಸಂದರ್ಭದಲ್ಲಿ ತಹಸೀಲ್ದಾರ ನಾಗರಾಜ ಕೆ ಸೇರಿದಂತೆ ತಹಸೀಲ್ದಾರ ಕಚೇರಿಯ ಶಿರಸ್ತೇದಾರರು, ಇತರೆ ಸಿಬ್ಬಂದಿಗಳು ಮತ್ತು ಸಾರ್ವಜನಿಕರು ಹಾಜರಿದ್ದರು.

## ಕಚೇರಿಯ ಅವ್ಯವಸ್ಥೆಗೆ ಡಿಸಿ ಸಿಡಿಮಿಡಿ

■ ವಿಜಯಸಾಕ್ಷಿ ಸುದ್ದಿ, ರೋಣ

ರೋಣ ತಹಸೀಲ್ದಾರ ಕಚೇರಿಗೆ ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್ ಭೇಟಿ ನೀಡಿದ ಸಂದರ್ಭದಲ್ಲಿ ಅಲ್ಲಿನ ಅವ್ಯವಸ್ಥೆಗಳನ್ನು ಕಂಡು, ತಾಲೂಕಾ ದಂಡಾಧಿಕಾರಿ ಕೆ.ನಾಗರಾಜರನ್ನು ತರಾಟೆಗೆ ತೆಗೆದುಕೊಂಡರು.

ಜಿಲ್ಲಾಧಿಕಾರಿಗಳು ತಹಸೀಲ್ದಾರ ಕಚೇರಿಯ ಚುನಾವಣಾ ವಿಭಾಗಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ, ಅಲ್ಲಿನ ಗಲೀಜು ವಾತವರಣ, ಅವ್ಯವಸ್ಥೆ ಕಂಡು ಸಿಡಿಮಿಡಿಗೊಂಡರು. ಇದೇನು ಸರ್ಕಾರಿ ಕಚೇರಿಯಾ ಅಥವಾ ಕೊಳಚೆ ಪ್ರದೇಶವಾ? ಸ್ವಚ್ಛವಾಗಿ ಇಟ್ಟುಕೊಳ್ಳಲು ಬರುವುದಿಲ್ಲವೇ? ದಿನಕ್ಕೊಮ್ಮೆಯಾದರು ಕಚೇರಿಯ ವಿಭಾಗಗಳನ್ನು ಸುತ್ತಾಡಿ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ತರುವಾಯ, ಸರ್ವೆ ಇಲಾಖೆಗೆ ಭೇಟಿ ನೀಡಿ, ದಾಖಲಾತಿಗಳನ್ನು ಪರಿಶೀಲಿಸಿದರು.

ಕೆಲಸ ಬಯಸಿ ಬರುವ ಜನರನ್ನು ವಿನಾಕಾರಣ ಅಲೆದಾಡಿಸಬೇಡಿ. ಅಲ್ಲದೆ ಸರ್ವೇ ಇಲಾಖೆಯಿಂದ ಅನೇಕ ಸಮಸ್ಯೆಗಳು ಸೃಷ್ಟಿಯಾಗುತ್ತಿದ್ದು, ಸಕಾಲಕ್ಕೆ ಸಾರ್ವಜನಿಕರಿಗೆ ಸೇವೆಯನ್ನು ಒದಗಿಸಬೇಕು ಎಂದು ಎಚ್ಚರಿಸಿದರು.

ಗುಳಗುಳಿ ಗ್ರಾಮದ ಸಂಗಯ್ಯ ವಸ್ತ್ರದ ಎಂಬುವರು ಸ್ಮಶಾನಕ್ಕೆ ಭೂಮಿ ಕೊಟ್ಟು 5 ವರ್ಷ ಗತಿಸಿದರೂ ಇದುವರೆಗೂ ಅವರ ದಾಖಲಾತಿಗಳು ಸರಿಯಾಗಿಲ್ಲ ಎಂದು ಅಸಮಾಧಾನಗೊಂಡ ಜಿಲ್ಲಾಧಿಕಾರಿಗಳು, ಶೀಘ್ರವೇ ಅವರ ಜಮೀನುಗಳ ದಾಖಲಾತಿಗಳನ್ನು ಸರಿಪಡಿಸಿ ನೆರವು ನೀಡಿ. ಸ್ಮಶಾನಕ್ಕೆ ಜಾಗ ಸಿಗುತ್ತಿಲ್ಲ. ಹೀಗಿರುವಾಗ, ಜಮೀನು ನೀಡಿದ ದಾನಿಗಳಿಗೇ ತೊಂದರೆಯಾದರೆ ಹೇಗೆ ಎಂದು ಸರ್ವೇ ಇಲಾಖೆಯ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ಅನಿರೀಕ್ಷಿತವಾಗಿ ಹಿರೇಹಾಳ ಗ್ರಾ.ಪಂ.ಗೆ ಭೇಟಿ ನೀಡಿ, ದಾಖಲಾತಿಗಳನ್ನು ಪರಿಶೀಲಿಸಿದ ಬಳಿಕ, ರೋಣಕ್ಕೆ ಆಗಮಿಸಿ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿದರು.



### ತಾಲೂಕಾ ಎಸ್‌ಸಿಪಿ-ಟಿಎಸ್‌ಪಿ ಪ್ರಗತಿ ಪರಿಶೀಲನಾ ಸಭೆಯಲ್ಲಿ ಶಾಸಕ ಚಂದ್ರು ಲಮಾಣಿ ಅಸಮಾಧಾನ

# ಸರ್ಕಾರದ ಸೌಲಭ್ಯಗಳು ಅರ್ಹರಿಗೆ ತಲುಪಲೇಬೇಕು

■ ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ

ಶಿರಹಟ್ಟಿ ಮೀಸಲು ಮತಕ್ಷೇತ್ರವಾಗಿದ್ದರೂ ಸಹ ಇಲ್ಲಿ ಸಮುದಾಯದವರಿಗೆ ಸರಕಾರ ಒದಗಿಸುವ ಸೌಲಭ್ಯಗಳನ್ನು ಸಮರ್ಪಕವಾಗಿ ತಲುಪಿಸುತ್ತಿಲ್ಲ, ಅಧಿಕಾರಿಗಳು ಈ ತಾಲೂಕಿಗೆ ಮೋಸ ಮಾಡಿ ಕೊಳ್ಳೆ ಹೊಡೆಯಲು ಬರುತ್ತಾರೆ ಎಂದು ಶಾಸಕ ಡಾ. ಚಂದ್ರು ಲಮಾಣಿ ಅಧಿಕಾರಿಗಳ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು.

ಅವರು ಮಂಗಳವಾರ ಶಿರಹಟ್ಟಿಯ ತಾ.ಪಂ ಸಭಾಭವನದಲ್ಲಿ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಜರುಗಿದ ತಾಲೂಕಾ ಮಟ್ಟದ ಎಸ್‌ಸಿಪಿ/ ಟಿಎಸ್‌ಪಿ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದರು.

ಸಮುದಾಯದವರ ಏಳಿಗೆಗಾಗಿ ಸರಕಾರ ಕೊಡಮಾಡುವ ಸವಲತ್ತುಗಳ ಬಗ್ಗೆ ನಡೆಯಬೇಕಿದ್ದ ಈ ಸಭೆಗೆ 35 ಇಲಾಖೆಗಳಲ್ಲಿ 20ಕ್ಕೂ ಹೆಚ್ಚು ಇಲಾಖೆಗಳ ಅಧಿಕಾರಿಗಳು ಗೈರಾಗಿದ್ದಾರೆ. ಹೀಗಾದರೆ ಯಾರ ಜೊತೆ ಚರ್ಚೆ ಮಾಡಬೇಕು? ಪದೇ ಪದೇ ಹೀಗಾಗುತ್ತಿರುವದರಿಂದ ಇಂತಹ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಜರುಗಿಸುವಂತೆ ಸಭೆಯಲ್ಲಿ ಠರಾವು ಹೊರಡಿಸುವ ಮೂಲಕ ಜಿಲ್ಲಾಧಿಕಾರಿಗಳಿಗೆ ಹಾಗೂ ಜಿ.ಪಂ ಸಿಇಓ ಅವರಿಗೆ ವರದಿ ಸಲ್ಲಿಸಲಾಗುವುದು ಎಂದರು.

ಶಿರಹಟ್ಟಿಯ ಕೃಷಿ ಇಲಾಖೆಯಲ್ಲಿ ಬೀಜ ಮತ್ತು ಔಷಧಿಗಾಗಿ ಪ್ರಸಕ್ತ ವರ್ಷ 22 ಲಕ್ಷ ರೂ ಅನುದಾನ ಬಿಡುಗಡೆಯಾಗಿದೆ. ಇದರ ಬಗ್ಗೆ ಸಹಾಯಕ ಕೃಷಿ ನಿರ್ದೇಶಕರನ್ನು ಕೇಳಿದರೆ ಮಾಹಿತಿ ನೀಡುತ್ತಿಲ್ಲ. ಅಧಿಕಾರಿಗಳು ತಮಗಿಷ್ಟ ಬಂದಂತೆ ವರ್ತಿಸುತ್ತಿದ್ದಾರೆ. ಯಾವ ಫಲಾನುಭವಿಗಳಿಗೂ ಸಹ ಸಮರ್ಪಕವಾಗಿ ಸರಕಾರದ ಸೌಲಭ್ಯ ತಲುಪುತ್ತಿಲ್ಲ. ಇವರು ಹಾಜರಾದಾಗಿನಿಂದ ಇಲ್ಲಿಯವರೆಗೂ ಇಲಾಖೆಯಲ್ಲಿ ವಿತರಣೆಯಾದ ಎಲ್ಲ ಸೌಲಭ್ಯಗಳ ಬಗ್ಗೆ ಸಂಪೂರ್ಣ ತನಿಖೆ ನಡೆಸಬೇಕೆಂದು ತಾ.ಪಂ ಇಓ ಅವರಿಗೆ ಸೂಚಿಸಿ, ಜಿಲ್ಲಾಧಿಕಾರಿಗಳಿಗೂ ಸಹ ವರದಿ ಸಲ್ಲಿಸಬೇಕೆಂದು ಶಾಸಕ ಡಾ. ಚಂದ್ರು ಲಮಾಣಿ ಸೂಚಿಸಿದರು.

ಬಹುತೇಕ ಇಲಾಖಾ ಅಧಿಕಾರಿಗಳು ಗೈರು ಉಳಿದಿದ್ದರಿಂದ ಮಾಹಿತಿ ಪಡೆದುಕೊಂಡ ಶಾಸಕ ಡಾ. ಚಂದ್ರು ಲಮಾಣಿ, ಸಭೆಯಲ್ಲಿಯೇ ಜಿಲ್ಲಾಧಿಕಾರಿಗಳೊಂದಿಗೆ ದೂರವಾಣಿ ಮೂಲಕ ಸಂಪರ್ಕಿಸಿ, ಕೃಷಿ ಇಲಾಖೆಯಲ್ಲಿ ಅಧಿಕಾರಿಗಳು ಸರಿಯಾಗಿ ಸ್ಪಂದಿಸುತ್ತಿಲ್ಲ, ಸಮರ್ಪಕ ಮಾಹಿತಿ ನೀಡುತ್ತಿಲ್ಲವೆಂಬುದರ ಬಗ್ಗೆ ಚರ್ಚೆ ನಡೆಸಿದರು.

▸▸ 3ನೇ ಪುಟಕ್ಕೆ




ಕ್ಷೇತ್ರದಲ್ಲಿ ನಡೆಯುವ ಎಲ್ಲ ಅಭಿವೃದ್ಧಿ ಕೆಲಸಗಳಲ್ಲಿಯೂ ಸಹ ನನ್ನ ಪಾತ್ರ ಪ್ರಮುಖವಾಗಿದೆ. ಇಲಾಖೆಗಳು ಕೊಡಮಾಡುವ ಸಹಾಯ-ಸೌಲಭ್ಯಗಳು ಅರ್ಹ ಫಲಾನುಭವಿಗಳಿಗೆ ತಲುಪಬೇಕು. ಈ ನಿಟ್ಟಿನಲ್ಲಿ ಫಲಾನುಭವಿಗಳ ಆಯ್ಕೆ ಮಾಡುವ ಸಂದರ್ಭದಲ್ಲಿ ನನ್ನ ಗಮನಕ್ಕೆ ತರಬೇಕು. ನಾನೇನು ಇಲ್ಲಿ ಕಾಟಾಚಾರಕ್ಕೆ ಬಂದಿಲ್ಲ, ನಾನು ಕ್ಷೇತ್ರದ ಜನತೆಯಿಂದ ಚುನಾಯಿತನಾದ ಶಾಸಕ. ಇದನ್ನು ಎಲ್ಲ ಅಧಿಕಾರಿಗಳೂ ನೆನಪಿನಲ್ಲಿಟ್ಟುಕೊಂಡು ಕೆಲಸ ಮಾಡಿ ಎಂದು ಡಾ. ಲಮಾಣಿ ಎಚ್ಚರಿಸಿದರು.

## ಹೊರ ರಾಜ್ಯಗಳಿಗೆ ಮೇವು ಸಾಗಾಣಿಕೆಗೆ ನಿರ್ಬಂಧ

■ ವಿಜಯಸಾಕ್ಷಿ ಸುದ್ದಿ, ಗದಗ

2023ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ರಾಜ್ಯದಲ್ಲಿನ ಬರ ಪರಿಸ್ಥಿತಿಯ ಹಿನ್ನೆಲೆಯಲ್ಲಿ ವಿಪತ್ತು ನಿರ್ವಹಣೆ ಕಾಯ್ದೆ 2005 ರನ್ವಯ ಅಂತರರಾಜ್ಯ ಮೇವು ಸಾಗಾಣಿಕೆಯನ್ನು ಜಿಲ್ಲೆಯ ಬರಪೀಡಿತ ತಾಲೂಕುಗಳೆಂದು ಘೋಷಿಸಿದ ದಿನಾಂಕದಿಂದ ಆರು ತಿಂಗಳು ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಜಾರಿಗೆ ಬರುವಂತೆ ನಿರ್ಬಂಧಿಸಿ ಆದೇಶಿಸಿದೆ.

ರಾಜ್ಯದಿಂದ ಮೇವು ಹೊರ ರಾಜ್ಯಗಳಿಗೆ ಸಾಗಾಣಿಕೆಯಾಗದಂತೆ ಹಾಗೂ ಒಣ ಮೇವನ್ನು ಯಾವುದೇ ರೂಪದಲ್ಲಿ ಹೊರ ರಾಜ್ಯಗಳಿಗೆ ಸಂಸ್ಕರಿಸಿ, ಸಾಗಾಣಿಕೆ ಮಾಡುವುದನ್ನು ಕಡ್ಡಾಯವಾಗಿ ನಿಷೇಧಿಸಿದೆ. ಜಿಲ್ಲಾ ಪೊಲೀಸ್ ಅಧೀಕ್ಷಕರು ಸಹ ನಿಯಮಾನುಸಾರ ಕ್ರಮ ಕೈಗೊಳ್ಳತಕ್ಕದ್ದು ಎಂದು ಸರ್ಕಾರದ ಆದೇಶದಲ್ಲಿ ಸೂಚಿಸಿದೆ ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿಗಳಾದ ವೈಶಾಲಿ ಎಂ.ಎಲ್. ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.




## ಅಕ್ರಮ ಮದ್ಯ ಮಾರಾಟಗಾರರಿಗೆ ಎಚ್ಚರಿಕೆ ನೀಡಿದ ಗ್ರಾಮಸ್ಥರು

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ತಾಲೂಕಿನ ಯತ್ತಿನಹಳ್ಳಿ ಗ್ರಾಮದಲ್ಲಿ ಅಕ್ರಮ/ಅನಧಿಕೃತ ಮದ್ಯ ಮಾರಾಟಗಾರರ ವಿರುದ್ಧ ರೋಸಿ ಹೋಗಿರುವ ಗ್ರಾಮಸ್ಥರು, ಗ್ರಾಮದೆಲ್ಲೆಡೆ ಭಿತ್ತಿಪತ್ರ ಅಂಟಿಸುವ ಮೂಲಕ ಮದ್ಯ ಮಾರಾಟ ನಿಲ್ಲಿಸುವಂತೆ ಎಚ್ಚರಿಕೆ ನೀಡಿದ್ದಾರೆ.

'ಗ್ರಾಮದಲ್ಲಿ ಅಕ್ರಮ ಮದ್ಯ ಮಾರಾಟಗಾರರಿಗೆ ತಿಳಿಸುವುದೇನೆಂದರೆ, ಗ್ರಾಮದಲ್ಲಿ ಮದ್ಯ ಮಾರಾಟ ಮಾಡದಂತೆ ನಿಮಗೆ ಪದೇ ಪದೇ ಎಚ್ಚರಿಸಿದ್ದರೂ ಮತ್ತದೇ ದಂಧೆ ಮಾಡುತ್ತಿದ್ದೀರಿ. ನೀವು ಹಲವು ಜನರ ಸಾವಿಗೆ ಕಾರಣರಾಗಿದ್ದೀರಿ. ನಿಮ್ಮ ದಂದೆಯ ಸಂಪೂರ್ಣ ವಿಡಿಯೋ ನಮ್ಮ ಬಳಿ ಇದೆ. ಕೂಡಲೇ ಮದ್ಯ ಮಾರಾಟ ನಿಲ್ಲಿಸಬೇಕು. ಇಲ್ಲದಿದ್ದರೆ ಅಬಕಾರಿ ಕಚೇರಿಗೆ ದಾಖಲೆಗಳನ್ನು ಕಳಿಸುತ್ತೇವೆ. ನಿಮ್ಮನ್ನು ಖಾಯಂ ಗ್ರಾಮದಿಂದ ಬಹಿಷ್ಕಾರ ಹಾಕಬೇಕಾಗುತ್ತದೆ' ಎಂದು ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಾರೆನ್ನಲಾದ ಮಂಜುನಾಥ ಕೊಟಗಿ, ರತ್ನವ್ವ ಡೋಣಿ, ಚನ್ನಪ್ಪ ಕುರಹಟ್ಟಿ, ಪರಮೇಶಪ್ಪ ಲಿಂಗದಾಳ, ಮೈಲಾರಪ್ಪ ತಳಗೇರಿ ಎಂಬುವವ ಹೆಸರು ನಮೂದಿಸಿರುವ ಬಿತ್ತಿ ಪತ್ರವನ್ನು ಗ್ರಾಮದ ದೇವಸ್ಥಾನ, ಬಸ್‌ಸ್ಟ್ಯಾಂಡ್, ಚಾವಡಿ, ಹೋಟೆಲ್ ಸೇರಿ ಸಾರ್ವಜನಿಕ ಸ್ಥಳಗಳಲ್ಲಿ ತಮ್ಮ ಹೆಸರು ಬಹಿರಂಗಪಡಿಸದ ಗ್ರಾಮಸ್ಥರು ಅಂಟಿಸಿದ್ದಾರೆ.




ಈ ಗ್ರಾಮದಲ್ಲಿ ಕಳೆದ ಅನೇಕ ವರ್ಷಗಳಿಂದ ಅಕ್ರಮ ಮದ್ಯ ಮಾರಾಟವಾಗುತ್ತಿದೆ. ಇದರಿಂದ ಗ್ರಾಮದಲ್ಲಿ ಯುವಕರು ಸೇರಿ ಎಲ್ಲ ವಯೋಮಾನದವರು ಕುಡಿತದ ದಾಸರಾಗುತ್ತಿದ್ದಾರೆ. 2 ವರ್ಷಗಳ ಹಿಂದೆಯೂ ಕೂಡ ಇದೇ ರೀತಿಯ ಭಿತ್ತಿಪತ್ರಗಳನ್ನು ಅಂಟಿಸಲಾಗಿತ್ತು.

ಈ ಕುರಿತು ಅಬಕಾರಿ ಉಪವಿಭಾಗದ ಉಪ ಅಧೀಕ್ಷಕ ಎ.ಬಿ. ಹಿರೇಮಠ ಅವರನ್ನು ಸಂಪರ್ಕಿಸಿದಾಗ, ಗ್ರಾಮದಲ್ಲಿ ಅನಧಿಕೃತ ಮದ್ಯ ಮಾರಾಟ ಮಾಡುವವರ ಮೇಲೆ ಈಗಾಗಲೇ ಪ್ರಕರಣ ದಾಖಲಿಸಿದ್ದೇವೆ. ಭಿತ್ತಿಪತ್ರದ ಬಗ್ಗೆ ಸ್ಥಳೀಯ ಸಿಬ್ಬಂದಿಗಳಿಂದ ಮಾಹಿತಿ ಪಡೆದು ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲಿಸಿ ಕ್ರಮ ಕೈಗೊಳ್ಳುತ್ತೇವೆ ಎಂದರು.

## ತೆಲಂಗಾಣ ಚುನಾವಣೆಗೆ ಗದಗ ಗೃಹ ರಕ್ಷಕರು

■ ವಿಜಯಸಾಕ್ಷಿ ಸುದ್ದಿ, ಗದಗ



ತೆಲಂಗಾಣ ರಾಜ್ಯದ ವಿಧಾನಸಭೆಯ ಚುನಾವಣೆಯು ನ. 30ರಂದು ಜರುಗಲಿದೆ. ತೆಲಂಗಾಣ ರಾಜ್ಯದ ನಾರಾಯಣಪೇಟೆ ಜಿಲ್ಲೆಯ ಚುನಾವಣಾ ಭದ್ರತೆಗಾಗಿ ಗದಗ ಜಿಲ್ಲೆಯ ಗೃಹ ರಕ್ಷಕ ದಳದ 300 ಸಿಬ್ಬಂದಿಗಳು, ಬಾಗಲಕೋಟೆ ಜಿಲ್ಲೆಯ 300 ಹಾಗೂ ದಾವಣಗೇರೆ ಜಿಲ್ಲೆಯ 150 ಗೃಹ ರಕ್ಷಕರು ಚುನಾವಣಾ ಭದ್ರತಾ ಸಿಬ್ಬಂದಿಯಾಗಿ ನವೆಂಬರ್ 27ರಿಂದ ಡಿಸೆಂಬರ್ 2ರವರೆಗೆ ಸೇವೆ ಸಲ್ಲಿಸಲಿದಾರೆ. ಈ ಭದ್ರತಾ ಪಡೆಯ ನೋಡಲ್ ಅಧಿಕಾಯಾಗಿ ಗದಗ ಜಿಲ್ಲಾ ಗೃಹ ರಕ್ಷಕ ದಳದ ಸಮಾದೇಷ್ಠರಾದ ವಿಶ್ವನಾಥ ಯಳಮಲಿಯವರು ಕಾರ್ಯನಿರ್ವಹಿಸಲಿದ್ದಾರೆ. ಮಂಡ್ಯ ಜಿಲ್ಲೆಯ ಉಪ ಸಮಾದೇಷ್ಠರಾದ ಪುರುಷೋತ್ತಮ ರಾವ್, ಬೋಧಕ ಸಿಬ್ಬಂದಿಗಳಾದ ಕಿರಣಕುಮಾರ ಕಟಗಿ, ಎನ್. ಶ್ರೀನಿವಾಸ, ಅಹ್ಮದ ಮುಂತಾದವರು ಭದ್ರತಾ ಸಿಬ್ಬಂದಿಗಳಾಗಿ ಭಾಗವಹಿಸಲಿದ್ದಾರೆ.

## ದಾಸಶ್ರೇಷ್ಠ ಶ್ರೀ ಕನಕದಾಸರ ಜಯಂತ್ಯುತ್ಸವ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರುಗಳ ಸಹಯೋಗದಲ್ಲಿ ದಾಸಶ್ರೇಷ್ಠ ಶ್ರೀ ಕನಕದಾಸರ ಜಯಂತ್ಯುತ್ಸವವನ್ನು ನವೆಂಬರ್ 30 ರಂದು ಬೆಳಿಗ್ಗೆ 9 ಗಂಟೆಗೆ ನಗರದ ಹಾತಲಗೇರಿ ನಾಕಾದಲ್ಲಿನ ಶ್ರೀ ಕನಕದಾಸರ ವೃತ್ತದಲ್ಲಿ ಹಮ್ಮಿಕೊಳ್ಳಲಾಗಿದೆ.

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಕಾರ್ಯಕ್ರಮದ ಘನ ಉಪಸ್ಥಿತಿ ವಹಿಸಲಿದ್ದಾರೆ.

ರಾಜ್ಯದ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ.

ಮುಖ್ಯಅತಿಥಿಗಳಾಗಿ ಸರ್ಕಾರಿ ಮುಖ್ಯ ಸಚೇತಕರು ಹಾಗೂ ವಿಧಾನ ಪರಿಷತ್ ಸದಸ್ಯರಾದ ಸಲೀಂ ಅಹ್ಮದ್ , ಸಂಸದರುಗಳಾದ ಶಿವಕುಮಾರ ಉದಾಸಿ, ಪಿ.ಸಿ.ಗದ್ದಿಗೌಡರ, ವಿಧಾನಪರಿಷತ್ ಸದಸ್ಯರುಗಳಾದ ಎಸ್.ವಿ. ಸಂಕನೂರ, ಪ್ರದೀಪ ಶೆಟ್ಟರ್, ನರಗುಂದ ಶಾಸಕರಾದ ಸಿ.ಸಿ.ಪಾಟೀಲ, ರೋಣ ಶಾಸಕ ಜಿ.ಎಸ್.ಪಾಟೀಲ, ಶಿರಹಟ್ಟಿ ಶಾಸಕ ಡಾ.ಚಂದ್ರು ಲಮಾಣಿ, ಗದಗ ಬೆಟಗೇರಿ ನಗರಸಭೆ ಅಧ್ಯಕ್ಷೆ ಉಷಾ ದಾಸರ, ನಗರಸಭೆ ಉಪಾಧ್ಯಕ್ಷೆ ಸುನಂದಾ ಬಾಕಳೆ ಆಗಮಿಸುವರು.

ವಾಣಿಜ್ಯ ತೆರಿಗೆ ಆಯುಕ್ತರು ಹಾಗೂ ಗದಗ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಸಿ.ಶಿಖಾ, ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್.ನೇಮಗೌಡ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ವೀರಯ್ಯಸ್ವಾಮಿ ಬಿ. ಸ್ವಾಗತ ಕೋರಿದ್ದಾರೆ.

## ಸಂಪಾದಕೀಯ

### ಅಂತರ್ಜಲ ಕುಸಿತ; ಹೆಚ್ಚಿದ ಆತಂಕ

ದೇಶದಲ್ಲಿ ಇವತ್ತು ಅತ್ಯಂತ ಹೆಚ್ಚು ಚರ್ಚಿತ ವಿಷಯ ಎಂದರೆ ಅದು ರಾಜಕೀಯ. ರಾಜಕಾರಣ ಬಿಟ್ಟರೆ ಜಾತಿ ಧರ್ಮ, ವೈಯಕ್ತಿಕ ಟಿಕೆ ಟಿಪ್ಪಣಿ ಮತ್ತು ಮೊಬೈಲ್ ತಂತ್ರಜ್ಞಾನ.

ಇವಿಷ್ಟನ್ನು ಬಿಟ್ಟರೆ ದೇಶದಲ್ಲಿ ಬೇರೆ ವಿಷಯಗಳೇ ಇಲ್ಲ ಎನ್ನುವಂತಹ ವಾತಾವರಣ ಸೃಷ್ಟಿಯಾಗುತ್ತಿದೆ. ದೇಶಕ್ಕೆ ರಾಜ-ಕಾರಣ ಅತ್ಯಗತ್ಯ. ಜಾತಿ ಧರ್ಮ ಬದುಕಿಗೂ ಅವಶ್ಯಕತೆ. ಅದೇ ರೀತಿ ತಂತ್ರಜ್ಞಾನದ ಜೊತೆಗೆ ಹೆಜ್ಜೆಯೂ ಹಾಕಬೇಕು. ಇದೆಲ್ಲದಕ್ಕಿಂತ ಮುಖ್ಯವಾಗಿ ನಮ್ಮ ಪರಿಸರವನ್ನು ಕಾಪಾಡಿಕೊಂಡು ಮುಂದಿನ ಪೀಳಿಗೆಗೆ ಉತ್ತಮ ವಾತಾವರಣ ಕಲ್ಪಿಸುವುದು ಕೂಡ ಅಷ್ಟೇ ಮುಖ್ಯವಾಗಿದೆ.

ಅದರಲ್ಲೂ ಜೀವ ಜಲ ವಿಷಯದಲ್ಲಿ ದೇಶ -ಭಾಷೆ- ಗಡಿ ಮೀರಿ ಚಿಂತನೆ ನಡೆಸಬೇಕಾದಂತಹ ಕಾಲ ಬಂದೊದಗಿದೆ. ವಿಶೇಷವಾಗಿ ಅಂತರ್ಜಲ ಕುಸಿತ ಭಾರತದಲ್ಲಿ ಬಹುದೊಡ್ಡ ಆತಂಕಕ್ಕೆ ಕಾರಣವಾಗುತ್ತಿದೆ. ಯಾಕೆಂದರೆ ಭಾರತ ಅತಿ ಹೆಚ್ಚು ಅಂತರ್ಜಲ ಬಳಕೆ ಮಾಡುವ ದೇಶಗಳಲ್ಲಿ ಮುಂಚೂಣಿಯಲ್ಲಿದೆ.

ವಿಶ್ವಸಂಸ್ಥೆಯ ಒಂದು ವರದಿಯ ಪ್ರಕಾರ 2025ರ ವೇಳೆಗೆ ಭಾರತದಲ್ಲಿ ಅಂತರ್ಜಲ ಮಟ್ಟ ಅತ್ಯಂತ ಕನಿಷ್ಠವಾಗಲಿದೆ ಎಂದು ಹೇಳಿದೆ. ಜನಪ್ರತಿನಿಧಿಗಳು, ಸರ್ಕಾರಗಳು ಈ ವರದಿಯನ್ನು ಗಂಭೀರವಾಗಿ ಪರಿಗಣಿಸದ ಕಾರಣ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು ವಿಚಾರಣೆ ಆರಂಭಿಸಿದೆ.

ಸಮಸ್ಯೆ ಗಂಭೀರತೆಯನ್ನ ಅರಿತಿರುವ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ, ಕೇಂದ್ರ ಸರ್ಕಾರ ಸೇರಿದಂತೆ 19 ರಾಜ್ಯಗಳು ಹಾಗೂ ಎರಡು ಕೇಂದ್ರಾಡಳಿತ ಪ್ರದೇಶಗಳ ಜಲಸಂಪನ್ಮೂಲ ಇಲಾಖೆಗೆ ವಿಶ್ವಸಂಸ್ಥೆಯ ವರದಿಯನ್ನು ಆಧರಿಸಿ ಪ್ರತಿಕ್ರಿಯೆ ನೀಡುವಂತೆ ಕೇಳಿದೆ.

ದಕ್ಷಿಣ ಭಾರತದ ರಾಜ್ಯಗಳಿಗಿಂತ ಉತ್ತರ ಭಾರತದ ರಾಜ್ಯಗಳಲ್ಲಿ ಅಂತರ್ಜಲ ಮಟ್ಟ ಕುಸಿತದ ಪ್ರಮಾಣ ತೀವ್ರಗೊಳ್ಳುತ್ತಿದೆ. ಪಂಜಾಬ್, ಹರಿಯಾಣ ರಾಜ್ಯಗಳಲ್ಲಿ ಇದರ ತೀವ್ರತೆ ಕೆಲವೇ ದಿನಗಳಲ್ಲಿ ಕಾಣುವಂತಾಗಲಿದೆ ಎನ್ನುವುದು ವಿಶ್ವಸಂಸ್ಥೆಯ ವರದಿಯಲ್ಲಿ ಉಲ್ಲೇಖವಾಗಿದೆ. ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿ ಪ್ರತಿಕ್ರಿಯೆ ಬಯಸಿದ ತಕ್ಷಣವೇ ಕೇಂದ್ರ ಸರಕಾರದ ಜಲಶಕ್ತಿ ಸಚಿವಾಲಯ, ಅಂತರ್ಜಲ ರಕ್ಷಣೆಗೆ ವಿಶ್ವಸಂಸ್ಥೆಯ ಎಲ್ಲ ಶಿಫಾರಸ್ಸುಗಳನ್ನ ಜಾರಿಗೊಳಿಸಲಾಗಿದೆ ಎನ್ನುವ ಉತ್ತರ ನೀಡಿತು.

ಕೇಂದ್ರ ಸರ್ಕಾರದ ಜಲ ಶಕ್ತಿ ಸಚಿವಾಲಯ ನೀಡಿದ ಮಾಹಿತಿ ಮತ್ತು ಸ್ಪಷ್ಟೀಕರಣಕ್ಕೂ ವಿಶ್ವ ಸಂಸ್ಥೆಯ ವರದಿಗೂ ಸಾಕಷ್ಟು ವ್ಯತ್ಯಾಸಗಳು ಗಮನಕ್ಕೆ ಬಂದಿವೆ. ಸರಕಾರ ಕಡತಗಳಲ್ಲಿ ತೋರಿಸುವ ಮಾಹಿತಿಗೂ ವಾಸ್ತವ ಮಾಹಿತಿಗೂ ಸಾಕಷ್ಟು ವ್ಯತ್ಯಾಸವಿರುವುದು ನಮ್ಮ ದೇಶದಲ್ಲಿ ಹೊಸದೇನಲ್ಲ. ಆದರೆ ಅಂತರ್ಜಲ ವಿಷಯದಲ್ಲೂ ಅದೇ ಪ್ರವೃತ್ತಿ ಹೊಂದಿರುವುದು ಮಾತ್ರ ಆತಂಕ ಮೂಡಿಸಿದೆ. ಸರಕಾರ, ಜನಸಮುದಾಯ ಪರಿಸರ ರಕ್ಷಣೆ ವಿಷಯದಲ್ಲಿ ಉದಾಸೀನ ಮಾಡಬಾರದು.

### ಲೋಕ ಕಲ್ಯಾಣಕ್ಕಾಗಿ ಶ್ರಮಿಸಿದ ದಾಸ ಶ್ರೇಷ್ಠ 'ಕನಕದಾಸ'ರಿಗೆ ನಮನ

# ತಲ್ಲಣಿಸದಿರು ಕಂಡ್ಯ ತಾಳು ಮನವೆ...


ಕನಕದಾಸರ ಅನೇಕ ಮುಂಡಿಗೆಗಳು ಅವರ ಸೃಜನಶೀಲತೆಗೆ, ಸಾಹಿತ್ಯ ಶ್ರೀಮಂತಿಕೆಗೆ, ಆಧ್ಯಾತ್ಮಿಕತೆ ವೈಚಾರಿಕತೆಗೆ ಸಾಕ್ಷಿಯಾಗಿವೆ. ಜ್ಞಾನ, ಭಕ್ತಿ, ವೈರಾಗ್ಯಗಳ ಮೂರುತಿಯಾದ ಕನಕದಾಸರು ದಾಸಸಾಹಿತ್ಯಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಮುಂಡಿಗೆ ಎಂಬ ಶಬ್ದಕ್ಕೆ ತೊಲೆ ಅಥವಾ ಮರದ ದಿಮ್ಮಿ ಎಂದು ಅರ್ಥವಾಗುತ್ತದೆ. ಮುಂಡಿಗೆ ಎಂಬುದು ದಾಸಸಾಹಿತ್ಯದಲ್ಲಿ ಸುಲಭವಾಗಿ ಬಿಡಿಸಲಾಗದ ಒಗಟಿನಂತಹ ರಚನೆಗಳಾಗಿದ್ದು, ಅರ್ಥಗರ್ಭಿತವಾಗಿರುತ್ತವೆ. ಬಿಗಿಯಾಗಿ ಹಿಡಿದ ಮುಷ್ಟಿಕೆಯಲ್ಲಿನ ಪದಾರ್ಥವನ್ನು ಬಿಡಿಸಿಕೊಳ್ಳಲು ಹೇಗೆ ಸುಲಭವಲ್ಲವೋ ಹಾಗೆಯೇ ಮುಂಡಿಗೆಗಳ ಹೂರಣವನ್ನು ಹೊರತೆಗೆಯುವುದು ಅಷ್ಟೇ ಕಷ್ಟಸಾಧ್ಯ.

ಮುಷ್ಟಿಕೆ ಎಂಬ ಪದದಿಂದ ಮುಂಡಿಗೆ ಪದ ರೂಪುಗೊಂಡಿರಬೇಕೆಂದು ಕೆಲ ವಿದ್ವಾಂಸರ ಅಭಿಪ್ರಾಯ. ಪದ್ಯ ನಿಬದ್ಧವಾಗಿ ಬೆಡಗಿನ ವಚನಗಳನ್ನು ಹೋಲುವ ಮುಂಡಿಗೆಗಳು ರೂಪಕ, ಸಂಕೇತ, ಪ್ರತಿಮೆಗಳ ಮೂಲಕ, ತತ್ವಸ್ವರೂಪ ಹಾಗೂ ಅನುಭಾವದ ನಿಗೂಢತೆಯನ್ನೂ, ಹೇರಳವಾದ ಪುರಾಣ ಪ್ರಸಂಗಗಳನ್ನೂ ಒಳಗೊಂಡಿರುತ್ತವೆ. ದಾಸಶ್ರೇಷ್ಠ ಕನಕದಾಸರು ಭಕ್ತಿ, ಜ್ಞಾನ ವೈರಾಗ್ಯಗಳನ್ನು ಜನರಲ್ಲಿ ಬಿತ್ತುತ್ತಾ ಸಮಾಜದ ಓರೆಕೋರೆಗಳನ್ನು ಸರಿಪಡಿಸುತ್ತಾ ಲೋಕಕಲ್ಯಾಣದಲ್ಲಿ ತೊಡಗಿ ಹರಿದಾಸ ಸಾಹಿತ್ಯದಲ್ಲಿ ಮಿಂಚಿದರು.

ಕನಕದಾಸರು ಹಾವೇರಿ ಜಿಲ್ಲೆಯ ಬಾಡ ಗ್ರಾಮದಲ್ಲಿ 1509ರಲ್ಲಿ ಜನಿಸಿದರು. ಇವರ ಮೂಲ ಹೆಸರು ತಿಮ್ಮಪ್ಪ ನಾಯಕ. ಅದೊಂದು ದಿನ ಕನಸಲ್ಲಿ ತಿರುಪತಿ ತಿಮ್ಮಪ್ಪ ಪ್ರತ್ಯಕ್ಷನಾಗಿ ತನಗೊಂದು ಗುಡಿ ಕಟ್ಟಿಸಿಕೊಡುವಂತೆ ಕೇಳಿದಾಗ ತಿಮ್ಮಪ್ಪ ನಾಯಕ ಮುಂದೆ ದೇವಾಲಯವೊಂದನ್ನ ಕಟ್ಟಿಸುವ ಕಾರ್ಯದಲ್ಲಿ ತೊಡಗಿದಾಗ ಅಡಿಪಾಯ ಹಾಕುವುದಕ್ಕೆ ಭೂಮಿ ಅಗೆಯುತ್ತಿರುವ ಸಂದರ್ಭದಲ್ಲಿ ಏಳು ಗಡಿಗೆಗಳಷ್ಟು ಚಿನ್ನದ ನಾಣ್ಯಗಳು ಹಾಗು ಒಂದು ದೇವರ ವಿಗ್ರಹ ಕೂಡ ಸಿಕ್ಕಿತು. ಮೂರ್ತಿಯನ್ನು ದೇವಾಲಯದಲ್ಲಿ ಪ್ರತಿಷ್ಠಾಪಿಸಿದ್ದ ತಿಮ್ಮಪ್ಪ ಮುಂದೆ ಸಿಕ್ಕಿದ ಹಣವನ್ನೆಲ್ಲ ಜನರ ಶ್ರೇಯಸ್ಸು ಹಾಗೂ ಧಾರ್ಮಿಕ ಕಾರ್ಯಗಳಿಗಾಗಿ ವಿನಿಯೋಗಿಸುವುದಕ್ಕೆ ಪ್ರಾರಂಭಿಸಿದರು. ಭೂಮಿಯಲ್ಲಿ ಬಂಗಾರ ಸಿಕ್ಕಿದ ಕಾರಣ ಇವರು ಮುಂದೆ ಕನಕ ನಾಯಕ ಎಂದು ಪ್ರಸಿದ್ಧಿ ಪಡೆದು, ತದನಂತರ ಯುದ್ಧವೊಂದರಲ್ಲಿ ವೈರಾಗ್ಯ ಉಂಟಾಗಿ ಅವರು ಕನಕದಾಸರಾದರು.

ಪುರಂದರದಾಸರ ಸಮಕಾಲೀನರಾದ ಕನಕದಾಸರು ವೇದಶಾಸ್ತ್ರ, ಉಪನಿಷತ್ತುಗಳನ್ನು ಕರತಲಾಮಲಕ ಮಾಡಿಕೊಂಡಿದ್ದ ಯತಿವರೇಣ್ಯರಾದ ವ್ಯಾಸತೀರ್ಥರ ಬಳಿಗೆ ಬಂದು ಶಿಷ್ಯತ್ವವನ್ನು ಪಡೆಯುತ್ತಾರೆ. ಪುರಂದರದಾಸರು ಹಾಗೂ ಕನಕದಾಸರನ್ನು ದಾಸಸಾಹಿತ್ಯದ ಅಶ್ವಿನಿ ದೇವತೆಗಳೆಂದೇ ವರ್ಣಿಸಲಾಗಿದೆ. ಭಗವಂತನ ಸಾಕ್ಷಾತ್ಕಾರಕ್ಕೆ ಭಕ್ತಿಯೇ ಮುಖ್ಯ ಎಂದು ಉಡುಪಿಯ ಶ್ರೀ ಕೃಷ್ಣನ ದರ್ಶನದಿಂದ ದಾಸವರೇಣ್ಯರು ತೋರಿಸಿಕೊಟ್ಟರು. ಇವರ ಅಂಕಿತನಾಮ ಕಾಗಿನೆಲೆ ಆದಿಕೇಶವ ಎಂಬುದಾಗಿದೆ.

'ತಲ್ಲಣಿಸದಿರು ಕಂಡ್ಯ ತಾಳು ಮನವೆ ಎಲ್ಲರನು ತಲಹುವನು ಇದಕೆ ಸಂಶಯವಿಲ್ಲ' ಎಂದರೆ ಲೋಕದಲ್ಲಿ ಎಲ್ಲರನ್ನೂ ಸಲಹುವ ಆ ಪರಮಾತ್ಮ ಇರುವಾಗ ಲೋಕದ ಜಂಜಡಗಳಿಗೆ ತಲ್ಲಣಗೊಳ್ಳದೇ ಧೈರ್ಯದಿಂದ ಬಾಳಬೇಕು, ಭೂಮಿ



ಮೇಲಿರುವ ಸಸ್ಯವರ್ಗ, ಪ್ರಾಣಿ-ಪಕ್ಷಿ ವರ್ಗಗಳನ್ನು ದೇವರೇ ಸಲಹುತ್ತಿರುವದು, ಮರವೊಂದು ಬೆಟ್ಟದ ತುದಿಯಲ್ಲಿ ಹುಟ್ಟಿದರೆ ಅದಕ್ಕೆ ನೀರೆರೆಯುವುದು ದೇವರೇ ಹೊರತು ಮನುಷ್ಯರಲ್ಲ. ಅದೇ ರೀತಿ ಅಡವಿಯಲ್ಲಿ ಓಡಾಡುವ ಮೃಗ-ಪಕ್ಷಿಗಳಿಗೆ ಹೊತ್ತು ಹೊತ್ತಿಗೆ ಆಹಾರ ಒದಗಿಸುವವನೂ ಭಗವಂತನೇ ಆಗಿರುತ್ತಾನೆ. ಎಲ್ಲೋ ಕಲ್ಲಿನಲ್ಲಿ ಹುಟ್ಟುವ ಕಪ್ಪೆಗೂ ಅದು ವಾಸಿಸುವಲ್ಲಿಯೇ ದೇವರು ಆಹಾರ ದೊರಕುವಂತೆ ಮಾಡುವನೆಂದ ಮೇಲೆ ನಮ್ಮೆಲ್ಲರನ್ನೂ ಆತ ರಕ್ಷಿಸುವುದರಲ್ಲಿ ಯಾವ ಸಂಶಯವೂ ಇಲ್ಲ. ಕಾರಣ, ಮನುಷ್ಯರಾದ ನಾವು ಸುಖಕ್ಕೆ ಹಿಗ್ಗದೇ ದುಃಖಕ್ಕೆ ಕುಗ್ಗದೇ ತಟಸ್ಥಮನಸ್ಕರಾಗಿರಬೇಕು ಎಂದು ಕನಕದಾಸರು ಹೇಳಿದ್ದಾರೆ. ಪರಮಾತ್ಮನ ಬಗ್ಗೆ ಅನನ್ಯ ಭಕ್ತಿ, ಅಚಲವಾದ ವಿಶ್ವಾಸ, ದೃಢವಾದ ನಂಬಿಕೆ ಇಟ್ಟು ತಮ್ಮ ಕರ್ತವ್ಯಗಳನ್ನು ಮಾಡುತ್ತಾ ಜೀವನ ನಡೆಸಬೇಕು ಎಂದು ಸಮಾಜಕ್ಕೆ ತಿಳಿಸಿಕೊಟ್ಟಿದ್ದಾರೆ.

ಕನಕದಾಸರ ಎಲ್ಲ ಕಾವ್ಯಗಳು ಕವಿ ಸಹಜವಾದ ವರ್ಣನೆಗಳಿಂದ ಉಪಮೆಗಳಿಂದ ಅಲಂಕೃತಗೊಂಡಿದ್ದು ಅವರ ಕಾವ್ಯ ಕೌಶಲ್ಯ ಕವಿಗಳಿಗೆ ಮಾದರಿ. ಅವರ ಕೀರ್ತನೆಗಳಲ್ಲಿ ಭಕ್ತಿಯ ಪಾರಮ್ಯವನ್ನು ಕಾಣಬಹುದಾಗಿದೆ. ವಿನೀತ ಭಾವಹೊಂದಿದ್ದ ಕನಕದಾಸರು ಜಾತಿ, ಮತಗಳ ಕಟ್ಟುಪಾಡಿಲ್ಲದೆ, ತಮ್ಮ ಅನುಭಾವದಿಂದ ಹೊರಹೊಮ್ಮಿರುವ ಭಕ್ತಿ-ಭಾವಗಳನ್ನು ಗೀತೆಗಳ ಮೂಲಕ ಹಾಡಿ ಲೋಕ ಕಲ್ಯಾಣಕ್ಕಾಗಿ ಶ್ರಮಿಸಿದ್ದಾರೆ.

ಇಂದಿನ ಯಾಂತ್ರಿಕ, ಒತ್ತಡಮಯ, ಸ್ಪರ್ಧಾತ್ಮಕ ಯುಗದಲ್ಲಿ ದಾಸಶ್ರೇಷ್ಠರಾದ ಕನಕದಾಸರ ಜಯಂತಿಯನ್ನು ಆಚರಿಸುವುದಷ್ಟೇ ಅಲ್ಲದೇ ಆಧ್ಯಾತ್ಮಿಕತೆ, ವೈಚಾರಿಕತೆ, ಧಾರ್ಮಿಕತೆ, ಭಕ್ತಿ ಪರವಶತೆಯಿಂದ ಪರಮಾತ್ಮನ ಕುರಿತು ರಚಿಸಿರುವ ಕೃತಿ, ಕೀರ್ತನೆ, ಸುಳಾದಿ, ಮುಂಡಿಗೆ, ಭಕ್ತಿಗೀತೆಗಳನ್ನು ಅರ್ಥೈಸಿಕೊಳ್ಳುವುದು ಸಹ ಇಂದಿನ ಅವಶ್ಯಕತೆಯಾಗಿದೆ. ಅಂದಾಗ ಮಾತ್ರ ಸಮಾಜದಲ್ಲಿ ಪ್ರತಿಯೊಬ್ಬರೂ ಸಂತೃಪ್ತ, ಶಾಂತ ರೀತಿಯ ಜೀವನ ನಡೆಸಲು ಸಾಧ್ಯವಾಗಲಿದೆ.

**– ಅಂಜನಾ ರಾಘವೇಂದ್ರ ಕುಬೇರ.**
**ವಾರ್ತಾ ಮತ್ತು ಸಾ.ಸಂ. ಇಲಾಖೆ, ಗದಗ.**

# ಪರೀಕ್ಷೆ ನೋಂದಣಿಗೆ ಡಿ.2 ಕೊನೆಯ ದಿನ

**■ವಿಜಯಸಾಕ್ಷಿ ಸುದ್ದಿ, ಗದಗ**

ಸರ್ಕಾರಿ ಪಾಲಿಟೆಕ್ನಿಕ್, ನರಸಾಪೂರ, ಬೆಟಗೇರಿ ಗದಗ ಸಂಸ್ಥೆಯಲ್ಲಿ 2009-10 ರಿಂದ 2014-15ನೇ ಸಾಲಿನವರೆಗೆ ಮೊದಲನೇ ವರ್ಷದ ( ಸಿ-09 ಪಠ್ಯಕ್ರಮ) ಡಿಪ್ಲೋಮಾಗೆ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಹಾಗೂ 2011-12 ರಿಂದ 2015-16ನೇ ಸಾಲಿನವರೆಗೆ ಲ್ಯಾಟರಲ್ ಎಂಟ್ರಿ ಮುಖಾಂತರ ಎರಡನೇ ವರ್ಷಕ್ಕೆ ( ಸಿ-09 ಪಠ್ಯಕ್ರಮ) ಪ್ರವೇಶ ಪಡೆದ ಐ.ಟಿ.ಐ. ವಿದ್ಯಾರ್ಥಿಗಳಿಗೆ ಹಾಗೂ 2016-17 ಹಾಗೂ 2017-18ನೇ ಶೈಕ್ಷಣಿಕ ಸಾಲಿನಲ್ಲಿ ಲ್ಯಾಟರಲ್ ಎಂಟ್ರಿ ಮುಖಾಂತರ ( ಸಿ-15 ಪಠ್ಯಕ್ರಮ) ಎರಡನೇ ವರ್ಷಕ್ಕೆ ಪ್ರವೇಶ ಪಡೆದ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ 2023-24ನೇ ಶೈಕ್ಷಣಿಕ ಸಾಲಿನ 2023ರ ಡಿಸೆಂಬರ್ ಸೆಮಿಸ್ಟರ್ ಪರೀಕ್ಷೆಗೆ ಹಾಜರಾಗಲು ಸರ್ಕಾರ ಅನುಮತಿಸಿದೆ.

ಈ ಹಿನ್ನೆಲೆಯಲ್ಲಿ ಸದರಿ ಶೈಕ್ಷಣಿಕ ಸಾಲಿನ ವಿದ್ಯಾರ್ಥಿಗಳಿಗೆ ಮಾತ್ರ ಅನ್ವಯಿಸುವಂತೆ 2023ರ ಡಿಸೆಂಬರ್ ಸೆಮಿಸ್ಟರ್ ಪರೀಕ್ಷೆಗೆ ಡಿಸೆಂಬರ್ 2 ರೊಳಗೆ ನಿಯಮಾನುಸಾರ ಪರೀಕ್ಷಾ ಶುಲ್ಕವನ್ನು ಸಂಬಂಧಪಟ್ಟ ವಿದ್ಯಾರ್ಥಿಗಳು ಪಾವತಿಸಿ ಪರೀಕ್ಷೆಗೆ ನೊಂದಾಯಿ ಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಗದಗ ಸರ್ಕಾರಿ ಪಾಲಿಟೆಕ್ನಿಕ್, ನಾಗಸಮುದ್ರ ರಸ್ತೆ, ನರಸಾಪುರ , ಬೆಟಗೇರಿ-ಗದಗ ದೂ.ಸಂ. 08372-246486 ಸಂಪರ್ಕಿಸ ಬಹುದಾಗಿದೆ.

# ಶಾಸಕರ ನುಡಿ ಕನ್ನಡಿಗರನ್ನು ಕೆರಳಿಸಿದೆ



**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಕನ್ನಡ ರಾಜ್ಯೋತ್ಸವದ ನಿಮಿತ್ತ ತಾಲೂಕಿನ ವಿವಿಧ ರೈತಪರ ಹಾಗೂ ಕನ್ನಡಪರ ಸಂಘಟನೆಗಳ ಆಶ್ರಯದಲ್ಲಿ ಭಾನುವಾರ ಪಟ್ಟಣದ ಪುರಸಭೆ ಆವರಣದಲ್ಲಿ ಶಾಲಾ ಮಕ್ಕಳಿಗೆ ರಂಗೋಲಿ, ಸ್ಲೋ ಸೈಕ್ಲಿಂಗ್ ಸ್ಪರ್ಧೆಗಳನ್ನು ಅಯೋಜಿಸುವ ಮೂಲಕ ಕರ್ನಾಟಕ ರಾಜ್ಯ ಇಬ್ಭಾಗದ ಭವಿಷ್ಯ ನುಡಿದಿರುವ ಶಾಸಕ ಡಾ.ಚಂದ್ರು ಲಮಾಣಿ ಹೇಳಿಕೆಯನ್ನು ಖಂಡಿಸುವ ಕಾರ್ಯಕ್ರಮ ನಡೆಸಲಾಯಿತು.

ಈ ವೇಳೆ ಮಾತನಾಡಿದ ತಾಲೂಕಾ ಪಕ್ಷಾತೀತ ರೈತಪರ ಹೋರಾಟ ಸಮಿತಿ ಅಧ್ಯಕ್ಷ ಮಹೇಶ ಹೊಗೆಸೊಪ್ಪಿನ, ಕರ್ನಾಟಕದ ಅಖಂಡತೆ, ಏಕೀಕರಣಕ್ಕಾಗಿ ಅನೇಕ ಮಹನೀಯರು ಸರ್ವಸ್ವವನ್ನೇ ತ್ಯಾಗ ಮಾಡಿದ್ದಾರೆ. ಹಾಗಿರುವಾಗ, ಕ್ಷೇತ್ರದ ಶಾಸಕ ಡಾ. ಚಂದ್ರು ಲಮಾಣಿ ಕರ್ನಾಟಕದ ಇಬ್ಭಾಗದ ಬಗ್ಗೆ ಭವಿಷ್ಯ ನುಡಿದಿರುವುದು ಕನ್ನಡಿಗರನ್ನು ಕೆರಳಿಸಿದೆ.

ಅವರಿಗೆ ರೈತರು, ನೌಕರವರ್ಗದವರ ಬಗ್ಗೆ ಕಿಂಚಿತ್ತೂ ಗೌರವವಿಲ್ಲ. ಅವರ ನಡೆ-ನುಡಿ-ನಿಲುವು ಬದಲಿಸಿಕೊಳ್ಳಬೇಕು. ರೈತಪರ ಸಂಘಟನೆಗಳು ನ್ಯಾಯಯುತ ಹೋರಾಟದ ವೇಳೆ ನಡೆದುಕೊಂಡ ರೀತಿಯ ಬಗ್ಗೆ ಬಹಿರಂಗ ಕ್ಷಮೆ ಕೇಳದಿದ್ದರೆ ನ.29ರಂದು 'ನಮ್ಮ ನಡಿಗೆ ಶಾಸಕರ ಮನೆ ಕಡೆಗೆ' ಹೋರಾಟ ಪ್ರಾರಂಭವಾಗುತ್ತದೆ. ಅಷ್ಟೇ ಅಲ್ಲದೇ ಬೆಳಗಾವಿ ಸುವರ್ಣಸೌಧದಲ್ಲಿ ಡಿ.4ರಂದು ಶಾಸಕರ ವರ್ತನೆಯ ಬಗ್ಗೆ ವಿಧಾನಸಭಾ ಸಭಾಪತಿಗಳಿಗೆ ಮನವಿ ಸಲ್ಲಿಸಲಾಗುವುದು ಎಂದರು.

ಈ ಸಂದರ್ಭದಲ್ಲಿ ನಾಗರಾಜ ಚಿಂಚಲಿ, ಶಿವನಗೌಡ ಅಡರಕಟ್ಟಿ, ಚನ್ನಪ್ಪ ಷಣ್ಮುಕಿ, ದ್ಯಾಮಣ್ಣ ಕಮತದ, ಶಿವಾನಂದ ಲಿಂಗಶೆಟ್ಟಿ, ಅಮರಪ್ಪ ಗುಡಗುಂಟಿ, ಎನ್.ಪಿ. ಪ್ಯಾಟಿಗೌಡ್ರ, ಆನಂದ ಅಮರಶೆಟ್ಟಿ, ರಾಮಣ್ಣ ಗೌರಿ, ಖಾನಸಾಬ ಸೂರಣಗಿ, ರಾಜು ಗುಡಗೇರಿ ಇದ್ದರು. 30ಕ್ಕೂ ಹೆಚ್ಚು ಮಕ್ಕಳು ಸ್ಪರ್ಧೆಗಳಲ್ಲಿ ಪಾಲ್ಗೊಂಡಿದ್ದರು.

# ಮೆಣಸಿನಕಾಯಿ ಕಳ್ಳರಿಗೆ ಹಿಗ್ಗಾಮುಗ್ಗಾ ಥಳಿಸಿದ ಗ್ರಾಮಸ್ಥರು

**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಮೆಣಸಿನಕಾಯಿ ಕದ್ದ ಕಳ್ಳರಿಬ್ಬರಿಗೆ ಗ್ರಾಮಸ್ಥರು ಧರ್ಮದೇಟು ನೀಡಿ, ಕದ್ದ ಮೆಣಸಿನಕಾಯಿಯನ್ನು ತಲೆ ಮೇಲೆ ಹೊರಿಸಿ, ಮೆರವಣಿಗೆ ಮಾಡಿದ ದೃಶ್ಯದ ವಿಡಿಯೋ ಭಾನುವಾರ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದೆ.

ಲಕ್ಷ್ಮೇಶ್ವರ ತಾಲೂಕಿನ ಯತ್ತಿನಹಳ್ಳಿ ಗ್ರಾಮದಲ್ಲಿ ಈ ಘಟನೆ ಶನಿವಾರ ನಡೆದಿದೆ ಎನ್ನಲಾಗಿದೆ. ಅದೇ ಗ್ರಾಮದ ಇಬ್ಬರು ಯುವಕರು ನಿತ್ಯ ಗ್ರಾಮದ ರೈತರ ಜಮೀನಿನಲ್ಲಿ ಅಷ್ಟಷ್ಟೇ ಮೆಣಸಿನಕಾಯಿ ಕದ್ದು ಅದನ್ನು ಮಾರಾಟ ಮಾಡಿ ಸಾರಾಯಿ ಕುಡಿಯುತ್ತಿದ್ದರು. ಇದನ್ನು ಕಾಯುತ್ತಾ ಕುಳಿತಿದ್ದ ರೈತರ ಕೈಗೆ ಸಿಕ್ಕಿಬಿದ್ದ ಕಳ್ಳರನ್ನು ಕಂಬಕ್ಕೆ ಕಟ್ಟಿ ಥಳಿಸಿದ್ದಾರೆ. ಮೊದಲೇ ಬರಗಾಲದಿಂದ ನೊಂದಿರುವ ರೈತರು ಆಕ್ರೋಶಗೊಂಡು, ಕಳ್ಳರನ್ನು



ಊರ ತುಂಬ ಮೆರವಣಿಗೆ ಮಾಡಿದ್ದಾರೆ. ಒಬ್ಬನ ಮೇಲೆ ಮತ್ತೊಬ್ಬನನ್ನು ನಿಲ್ಲಿಸಿ ದಂಡಿಸಿದ್ದಾರೆ.

ಈ ವೇಳೆ ಇಬ್ಬರೂ ತಮ್ಮ ತಪ್ಪನ್ನು ಕ್ಷಮಿಸುವಂತೆ ಅಂಗಲಾಚಿದಾಗ, ಗ್ರಾಮದ ಹಿರಿಯರು ಅವರಿಗೆ ಬುದ್ಧಿಮಾತು ಹೇಳಿ, ಬಿಡಿಸಿ ಕಳಿಸಿದ್ದಾರೆ ಎನ್ನಲಾಗಿದ್ದು, ಘಟನೆಯ ಕುರಿತು ಯಾವುದೇ ಪ್ರಕರಣ ದಾಖಲಾಗಿಲ್ಲ.

### ರಾಷ್ಟ್ರೀಯ ಸೇವಾ ಯೋಜನೆ ಶಿಬಿರದಲ್ಲಿ ಪ್ರೊ.ಚಂದ್ರಶೇಖರ ವಸ್ತ್ರದ

# ವೇದ, ಉಪನಿಷತುಗಳ ಸಾರ ಜಾನಪದದಲ್ಲಿದೆ



**■ವಿಜಯಸಾಕ್ಷಿ ಸುದ್ದಿ, ಗದಗ**

ಈಶಾವಾಸ್ಯಮಿದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್ ಎಂದು ವೇದೋಪನಿಷತ್ತುಗಳಲ್ಲಿ ಹೇಳಿದಂತೆ ಜನಪದರು ಬಹಳ ಸುಲಭವಾಗಿ, ಸರಳ ಭಾಷೆಯಲ್ಲಿ, ಶಿವ ಮರದ ಬೇರುಗಳಲ್ಲಿ ಇಳಿದಿದ್ದಾನೆ, ಹಸಿರೆಲೆಗಳಲ್ಲಿ ಕಂಗೊಳಿಸಿದ್ದಾನೆ, ಅರಳಿದ ಹೂಗಳಲ್ಲಿ ನಗುತ್ತಿದ್ದಾನೆ. ಆತ ಸರ್ವಾಂತರ್ಯಾಮಿ ಎಂದು ಬಹಳ ಸೊಗಸಾಗಿ ತಿಳಿಸಿದ್ದಾರೆ. ಜಾನಪದ ಗೀತೆಗಳಲ್ಲಿ ಲಯ, ತಾಳ, ರಾಗ ಮತ್ತು ಗೇಯತೆಯನ್ನು ಅನಾಯಾಸವಾಗಿ ಕಾಣಬಹುದು. ಜೀವನವನ್ನು ಸಾರ್ಥಕಗೊಳಿಸಿಕೊಳ್ಳುವ ಪರಿಯನ್ನು ಜಾನಪದದಿಂದಲೇ ಕಲಿಯಬೇಕೆಂದು ಹಿರಿಯ ಸಾಹಿತಿ, ವಿಶ್ರಾಂತ ಪ್ರಾಚಾರ್ಯ ಚಂದ್ರಶೇಖರ ವಸ್ತ್ರದ ತಿಳಿಸಿದರು.

ಅವರು ಬಿಂಕದಕಟ್ಟಿ ಗ್ರಾಮದಲ್ಲಿ ರವಿವಾರದಂದು ಗದಗನ ಸರಕಾರಿ ಪದವಿ ಪೂರ್ವ ಕಾಲೇಜಿನ ರಾ.ಸೇ. ಯೋ. ಘಟಕದ ವಾರ್ಷಿಕ ವಿಶೇಷ ಶಿಬಿರದ ಗೋಷ್ಠಿಯಲ್ಲಿ ಕನ್ನಡ ಜಾನಪದ ವಿಷಯದ ಕುರಿತು ಶಿಬಿರಾರ್ಥಿಗಳನ್ನುದ್ದೇಶಿಸಿ ಮಾತನಾಡಿದರು.

ಮುಂಜಾನೆ ಶಿಬಿರಾರ್ಥಿಗಳು ಸಾಲು ಮರದ ತಿಮ್ಮಕ್ಕ ಉದ್ಯಾನವನದಲ್ಲಿ ಸ್ವಚ್ಛತಾ ಕಾರ್ಯ ನೆರವೇರಿಸಿದರು.

ಸಾಯಂಕಾಲದ ಸಭೆಯ ಅಧ್ಯಕ್ಷತೆ ವಹಿಸಿದ್ದ ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಕೆ. ಎಚ್. ಬೇಲೂರ ಮಾತನಾಡಿ, ಸ್ವಾತಂತ್ರ್ಯ ಹೋರಾಟದಲ್ಲಿ ಹುತಾತ್ಮರಾದ ನಾಡಿನ ಧೀ-ರೋದಾತ್ತ ಮಕ್ಕಳ ಕಥನವನ್ನು ಹೇಳಿ ದೇಶಪ್ರೇಮ ಮೈಗೂಡಿಸಿಕೊಳ್ಳಲು ಕರೆ ನೀಡಿದರು.

ಉಪನ್ಯಾಸಕ ಬಿ. ಎಸ್. ಮಲ್ಲಾಪೂರ ಪ್ರಾಸ್ತಾವಿಕವಾಗಿ ಮಾತನಾಡಿದರು, ಜೆ. ಎಮ್. ಮಠಪತಿ ಆಶಯ ನುಡಿಗಳನ್ನಾಡಿದರು.

ಪೂಜಾ ಹಾಗೂ ಸಂಗಡಿಗರು ಪ್ರಾರ್ಥಿಸಿದರು. ಕು. ಸುಮಾ ಕಮ್ಮಾರ ಸ್ವಾಗತಿಸಿದರು ಉಪನ್ಯಾಸಕ ಶ್ರೀನಿವಾಸ ಬಡಿಗೇರ ವಂದಿಸಿದರು. ಕು. ನಿವೇದಿತಾ ಕಲಿಕೇರಿ ನಿರೂಪಿಸಿದರು.

# ಲಾಂಗ್ ನಿಂದ ಬೆದರಿಸಿ ಸುಲಿಗೆ ಮಾಡುತ್ತಿದ್ದ ನಾಲ್ವರು ಆರೋಪಿಗಳು ಅರೆಸ್ಟ್

**■ವಿಜಯಸಾಕ್ಷಿ ಸುದ್ದಿ, ಬೆಂಗಳೂರು**

ಲಾಂಗ್‌ನಿಂದ ಬೆದರಿಸಿ ಸುಲಿಗೆ ಮಾಡಿದ್ದ ನಾಲ್ವರನ್ನು ಪೊಲೀಸರು ಅರೆಸ್ಟ್ ಮಾಡಿದ್ದಾರೆ. ಇಮ್ರಾನ್, ಅರ್ಪಿತ ಅಹಮದ್, ಮೋಹಿತ್ ಅಲಿಯಾಸ್ ಮೋಹನ್ ಮತ್ತು ಸೈಯದ್ ಮಾಜಾ ಬಂಧಿತ ಸುಲಿಗೆಕೋರರು ಎಂದು ಹೇಳಲಾಗಿದೆ. ಆರೋಪಿ ಇಮ್ರಾನ್ ವಿರುದ್ಧ 30 ಪ್ರಕರಣಗಳು ದಾಖಲಾದರೆ ಮತ್ತೊಬ್ಬ ಆರೋಪಿ ಅರ್ಪಿತ್ ಅಹಮದ್ ವಿರುದ್ಧ 21 ಪ್ರಕರಣಗಳು ದಾಖಲಾಗಿವೆ. ನ.21ರಂದು ರಾತ್ರಿ 11.55ರ ಸುಮಾರಿನಲ್ಲಿ ನಾಲ್ಕು ಮಂದಿಯ ಗುಂಪೊಂದು ಆರ್‌ಟಿನಗರದ ಬಾರ್ ಅಂಡ್ ರೆಸ್ಟೋರೆಂಟ್‌ಗೆ ನುಗ್ಗಿ ಲಾಂಗ್‌ನಿಂದ ಬೆದರಿಸಿ ಕ್ಯಾಶ್ ಕೌಂಟರ್‌ನಲ್ಲಿದ್ದ 40 ಸಾವಿರ ಹಣ ಸುಲಿಗೆ ಮಾಡಿತ್ತು.

ಅಲ್ಲದೆ ಈ ಗುಂಪು ಡಿಜೆ ಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಚಹಾ ಅಂಗಡಿ ಮಾಲೀಕ ಬಾಗಿಲು ಹಾಕುತ್ತಿದ್ದಾಗ ಚಹಾ ಮಾಡಿಕೊಡುವಂತೆ ಲಾಂಗ್‌ನಿಂದ ಬೆದರಿಸಿದೆ. ಚಹಾ ಮಾಡಲು ಒಪ್ಪದಿದ್ದಾಗ ಮಾಲೀಕನ ಬಳಿಯಿದ್ದ ಹಣ ಸುಲಿಗೆ ಮಾಡಿ ಈ ಗುಂಪು ಪರಾರಿಯಾಗಿತ್ತು. ಈ ಬಗ್ಗೆ ಆರ್‌ಟಿನಗರ ಹಾಗೂ ಡಿಜೆ ಹಳ್ಳಿ ಪೊಲೀಸ್ ಠಾಣೆಯಲ್ಲಿ ಸುಲಿಗೆ ಪ್ರಕರಣ ದಾಖಲಾಗಿದ್ದವು.

ಈ ಪ್ರಕರಣದ ತನಿಖೆ ಕೈಗೊಂಡ ಆರ್‌ಟಿ ನಗರ ಠಾಣೆ ಪೊಲೀಸರು ಕೃತ್ಯ ನಡೆದ ಸ್ಥಳದ ಸುತ್ತಮುತ್ತಲಿನ ರಸ್ತೆಗಳಲ್ಲಿದ್ದ ಸಿ.ಸಿ.ಕ್ಯಾಮರಾಗಳನ್ನು ಪರಿಶೀಲಿಸಿ, ಕೃತ್ಯವೆಸಗಿದ ವ್ಯಕ್ತಿಯ ಚಹರೆ ಪಡೆದುಕೊಂಡು, ಕೃತ್ಯದಲ್ಲಿ ಭಾಗಿಯಾಗಿದ್ದ ನಾಲ್ವರನ್ನು ಬಂಧಿಸಿ 4 ದ್ವಿಚಕ್ರ ವಾಹನಗಳು ಮತ್ತು 12,500 ನಗದು ವಶಪಡಿಸಿಕೊಂಡಿದ್ದಾರೆ.



# ಸಂವಿಧಾನದ ತಿಳುವಳಿಕೆ ವಿದ್ಯಾವಂತರಿಗಷ್ಟೇ ಸೀಮಿತವಲ್ಲ




**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಸಂವಿಧಾನ ನಮ್ಮ ಬದುಕಿಗೆ ದೊಡ್ಡ ಶಕ್ತಿಯಾಗಿದ್ದು, ಪ್ರತಿಯೊಬ್ಬರೂ ರಾಮಾಯಣ, ಮಹಾಭಾರತಗಳಂತೆ ಭಾರತದ ಸಂವಿಧಾನದ ಮಹತ್ವವನ್ನು ಅರಿಯಬೇಕೆಂದು ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದ ವಿಶ್ರಾಂತ ನ್ಯಾಯಮೂರ್ತಿ ಎಚ್. ಎನ್. ನಾಗಮೋಹನದಾಸ್ ಕರೆ ನೀಡಿದರು.

ಅವರು ಗೊಜನೂರ ಗ್ರಾ.ಪಂ ಸಮುದಾಯ ಭವನದಲ್ಲಿ ಹಮ್ಮಿಕೊಂಡಿದ್ದ 'ಸಮುದಾಯದತ್ತ ಸಂವಿಧಾನ-ರೈತರೊಂದಿಗೆ ಸಂವಾದ' ಕಾರ್ಯಕ್ರಮದಲ್ಲಿ ಮಾತನಾಡಿ, ಸಂವಿಧಾನದ ಬಗ್ಗೆ ಎಲ್ಲರಲ್ಲೂ ನಂಬಿಕೆ, ವಿಶ್ವಾಸ, ಹೆಮ್ಮೆ, ಗೌರವ, ಪ್ರೀತಿ ಇರಬೇಕು. ಸಂವಿಧಾನದ ತಿಳುವಳಿಕೆ ವಿದ್ಯಾವಂತರಿಗಷ್ಟೇ ಅಲ್ಲದೇ ರೈತರು, ಜನಸಾಮಾನ್ಯರಿಗೂ ಅಗತ್ಯ ಎಂದರು.

ರೈತ ಚನ್ನಪ್ಪ ಷಣ್ಮುಕಿ, ಇತ್ತೀಚಿನ ದಿನಗಳಲ್ಲಿ ಕಳಪೆ ಬಿತ್ತನೆ ಬೀಜ, ರಸಗೊಬ್ಬರ, ಕ್ರಿಮಿನಾಶಕ ಮಾರಾಟ ಮಾಡುವ ಖಾಸಗಿ ಕಂಪನಿಗಳಿಂದ ಸಂಕಷ್ಟಕ್ಕೀಡಾಗುವ ರೈತರಿಗೆ ಕಾನೂನಿನಲ್ಲಿನ ಅವಕಾಶಗಳ ಬಗ್ಗೆ ಕೇಳಿದರು. ಇದಕ್ಕೆ ಪ್ರತಿಕ್ರಿಯಿಸಿದ ಅವರು, ಅನ್ನದಾತ ಈ ದೇಶದ ಬೆನ್ನಲುಬು. ಅನ್ನ ನೀಡುವ ರೈತರಿಗೆ ಮಾಡಿದ ಮೋಸ ಮಹಾಪರಾಧವಾಗಿದೆ. ಇದಕ್ಕೆ ಸೂಕ್ತ ದಾಖಲೆ-ಪುರಾವೆಗಳೊಂದಿಗೆ ನ್ಯಾಯ ಪಡೆಯಬಹುದಾಗಿದೆ. ಈ ನಿಟ್ಟಿನಲ್ಲಿ ರೈತರು ಜಾಗೃತ ರಾಗಬೇಕೆಂದರು.

ಓ. ಕೀರ್ತಿ ಪ್ರತಿಷ್ಠಾನ ಅಧ್ಯಕ್ಷ, ನ್ಯಾಯವಾದಿ ಬಸವರಾಜ ಸಂಶಿ, ಸಂವಿಧಾನದ ಅರಿವಿನ ಅಭಿಯಾನ ಚಿರಂತನವಾಗಿಸುವುದು ಪ್ರತಿಷ್ಠಾನದ ಧ್ಯೇಯೋದ್ದೇಶವಾಗಿದೆ ಎಂದರು.

ತಹಸೀಲ್ದಾರ ವಾಸುದೇವ ಸ್ವಾಮಿ, ಶ್ರೀನಿವಾಸಮೂರ್ತಿ ಕುಲಕರ್ಣಿ, ವಕೀಲರ ಸಂಘದ ಅಧ್ಯಕ್ಷ ಬಸವರಾಜ ಬಾಳೇಶ್ವರಮಠ, ಬಸವರಾಜ ಸುಳೆಬಾವಿ, ಅಶೋಕ ಕಟ್ಟಿಮನಿ, ಕೆ.ಎಚ್. ಪಾಟೀಲ, ಎಸ್.ಪಿ. ಪಾಟೀಲ, ಎಸ್.ಪಿ. ಬಳಿಗಾರ, ಗಂಗಾಧರ ಕರಿನಿಂಗಣ್ಣವರ, ರವಿ ಪೂಜಾರ, ಮಹಾಂತಗೌಡ ಪಾಟೀಲ, ನೀಲಮ್ಮ ಮಾದರ, ಅನಿಲ ಪಾಶಾ, ಯಲ್ಲಪ್ಪ ಮೋಡಿ, ಹೇಮಾವತಿ ಹಿರೇಮಠ, ಶಿವಾನಂದ ಮಾಳವಾಡ, ಮಂಜುನಾಥ ಘಂಟಿ, ವಿಠ್ಠಲ ನಾಯಕ ಇದ್ದರು. ಮಹೇಶ ಹಾರೋಗೇರಿ ನಿರ್ವಹಿಸಿದರು. ದಲಿತ ಕಲಾ ಮಂಡಳಿ ಗೆಳೆಯರು ಸಂವಿಧಾನ ಗೀತೆ ಪ್ರಸ್ತುತಪಡಿಸಿದರು.

# 'ಜ್ಯೂನಿಯರ್ ರವಿಚಂದ್ರನ್' ಈಗ ಉತ್ತರ ಕರ್ನಾಟಕದ ಕ್ರೇಜಿ ಸ್ಟಾರ್



■ವಿಜಯಸಾಕ್ಷಿ ಸುದ್ದಿ, ಗದಗ

ಬೆಟಗೇರಿಯ ಬೇಕರಿ ಮಾಲೀಕ, ಪತ್ರಿಕೆ ವಿತರಕ ವಾಸುದೇವ ಅವರು ಥೇಟ್ ಕ್ರೇಜಿಸ್ಟಾರ್ ರವಿಚಂದ್ರನ್‌ರಂತೆ ಕಾಣುತ್ತಾರೆ. ಈ ಜ್ಯೂನಿಯರ್ ರವಿಚಂದ್ರನ್ ಕಳೆದ 13 ವರ್ಷಗಳಿಂದ ಕನ್ನಡ ಪುಸ್ತಕಗಳನ್ನು ಓದಲು, ಕನ್ನಡ ಏಕೀಕರಣದ ಇತಿಹಾಸವನ್ನು ತಿಳಿಯಲು, ಕನ್ನಡ ಲೇಖಕರು, ಕವಿಗಳ ಬಗ್ಗೆ ಗ್ರಾಮೀಣ ಪ್ರದೇಶಗಳಲ್ಲಿ ಜಾಗೃತಿ ಮೂಡಿಸುತ್ತಿದ್ದಾರೆ.

ಬೆಟಗೇರಿಯ 58 ವರ್ಷದ ವಾಸುದೇವ ಹುಣಸಿಮರದ 2010ರಲ್ಲಿ ನವೆಂಬರ್ 1ರ ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ ಪಾಲ್ಗೊಂಡು ಕನ್ನಡ ಪ್ರಚಾರ ಕಾರ್ಯ ಆರಂಭಿಸಿದ್ದಾರೆ. ಪಂಪ, ರನ್ನ, ಕುವೆಂಪು, ಶಿವರಾಮ ಕಾರಂತರು ಮತ್ತಿತರ ಸಾಹಿತಿಗಳ ಜೀವನ ಚರಿತ್ರೆ ಮತ್ತು ಅವರ ಕೃತಿಗಳ ಬಗ್ಗೆ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ತಿಳಿಸಲು ಅವರು ಮೊದಲು ಯೋಚಿಸಿದರು. ಇದು ಗ್ರಾಮೀಣ ಭಾಗದ ಹಲವು ವಿದ್ಯಾರ್ಥಿಗಳ ಮೇಲೆ ಪರಿಣಾಮ ಬೀರಿದ್ದು, ಗದಗ ಗ್ರಾಮಗಳ ಶಾಲಾ ಶಿಕ್ಷಕರು ವಾಸುದೇವ ಅವರನ್ನು ಆಹ್ವಾನಿಸಲು ಆರಂಭಿಸಿದರು.

ಕ್ರೇಜಿ ಸ್ಟಾರ್ ರವಿಚಂದ್ರನ್ ಅವರ ಶೈಲಿಯಿಂದಾಗಿ ಗ್ರಾಮೀಣ ಪ್ರದೇಶದ ಜನರು ಅವರ ಜಾಗೃತಿ ಕಾರ್ಯಕ್ರಮಗಳಿಗೆ ಹಾಜರಾಗುತ್ತಿದ್ದರು. ನೋಡನೋಡುತ್ತಿದ್ದಂತೆ ವಾಸುದೇವ ಗದುಗಿನ ಜ್ಯೂನಿಯರ್ ರವಿಚಂದ್ರನ್ ಎಂದು ಪ್ರಸಿದ್ಧರಾದರು. ವಾಸುದೇವ ಅವರು ಜನರಲ್ಲಿ ಕೋಮು ಸೌಹಾರ್ದತೆಯನ್ನು ನಿರ್ಮಿಸಲು ಈ ತಂತ್ರವನ್ನು ಬಳಸಿದರು ಮತ್ತು ಗದಗ ಮತ್ತು ಸುತ್ತಮುತ್ತಲಿನ ಜಿಲ್ಲೆಗಳಲ್ಲಿ ಎಲ್ಲಾ ಧರ್ಮಗಳ ಜಾತ್ರೆಗಳು ಮತ್ತು ಹಬ್ಬಗಳಲ್ಲಿ ಭಾಗವಹಿಸತೊಡಗಿದರು.

ನವೆಂಬರ್ 3ರಂದು ಗದುಗಿನಲ್ಲಿ ನಡೆದ ಸಮಾರಂಭದಲ್ಲಿ ಪ್ರವಾಸೋದ್ಯಮ ಸಚಿವ ಎಚ್.ಕೆ. ಪಾಟೀಲ್ ಅವರನ್ನು ಕರೆದು ಅವರ ಪ್ರಯತ್ನವನ್ನು ಶ್ಲಾಘಿಸಿದರು. 'ದೇವರು ನನಗೆ ಉತ್ತಮ ಆರೋಗ್ಯ ದಯಪಾಲಿಸಿದ್ದಾನೆ. ನನ್ನ ವ್ಯಾಪಾರವೂ ಚೆನ್ನಾಗಿ ನಡೆಯುತ್ತಿದೆ. ನಾನು ಇದನ್ನೆಲ್ಲಾ ಮಾಡುತ್ತಿರುವುದು ಜನಪ್ರಿಯತೆ ಅಥವಾ ಹಣಕ್ಕಾಗಿ ಅಲ್ಲ. ಆದರೆ ಆತ್ಮತೃಪ್ತಿಗಾಗಿ ಎನ್ನುತ್ತಾರೆ ವಾಸುದೇವ.

### ತಾ.ಪಂ ಸಾಮಾನ್ಯ ಸಭೆಯಲ್ಲಿ ಆಡಳಿತಾಧಿಕಾರಿ ಪ್ರಶಾಂತ ವರಗಪ್ಪನವರ್

# ಗುಣಾತ್ಮಕ ಶಿಕ್ಷಣದತ್ತ ಅಗತ್ಯ ಕ್ರಮ ಕೈಗೊಳ್ಳಿ

■ವಿಜಯಸಾಕ್ಷಿ ಸುದ್ದಿ, ರೋಣ

ಪ್ರತಿ ಸಭೆಯಲ್ಲಿ ನೌಕರರ ವೇತನ ಪಾವತಿ ಬಗ್ಗೆ ಹೇಳಬೇಡಿ. ಶಾಲಾ ಮಕ್ಕಳ ಗುಣಾತ್ಮಕ ಶಿಕ್ಷಣದ ಕುರಿತು ಅಗತ್ಯ ಕ್ರಮ ಕೈಗೊಳ್ಳುವತ್ತ ಗಮನ ಕೇಂದ್ರೀಕರಿಸಿ. ಮಕ್ಕಳ ಶೈಕ್ಷಣಿಕ ಪ್ರಗತಿಗೆ ಯಾವ ಮಾನದಂಡಗಳನ್ನು ಅನುಸರಿಸುತ್ತಿದ್ದೀರಿ ಎಂದು ಆಡಳಿತಾಧಿಕಾರಿ ಪ್ರಶಾಂತ ವರಗಪ್ಪನವರ್ ಅಧಿಕಾರಿಗಳನ್ನು ಪ್ರಶ್ನಿಸಿದರು.

ಅವರು ಮಂಗಳವಾರ ತಾ.ಪಂ ಸಭಾಂಗಣದಲ್ಲಿ ತಾಲೂಕಾ ಮಟ್ಟದ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಕೇವಲ ವೇತನ ಪಾವತಿ ಮಾಡಿದ್ದರ ಬಗ್ಗೆ ತಿಳಿಸುವುದು ಸಮಂಜಸವಲ್ಲ. ಬದಲಾಗಿ ಶೈಕ್ಷಣಿಕ ಪ್ರಗತಿಗೆ ಯಾವ ಮಾನದಂಡಗಳನ್ನು ಹಾಕಿಕೊಂಡು ಮುಂದುವರೆಯುತ್ತಿದ್ದೇವೆ ಎನ್ನುವುದನ್ನು ಸಭೆಗೆ ತಿಳಿಸಬೇಕು ಎಂದು ಬಿಇಒ ರುದ್ರಪ್ಪ ಹುರಳಿಯವರನ್ನು ಪ್ರಶ್ನಿಸಿದರು. ಇದಕ್ಕೆ ಉತ್ತರಿಸಿದ ಬಿಇಒರವರು, ಈ ಬಾರಿ ಮಕ್ಕಳ ಶೈಕ್ಷಣಿಕ ಪ್ರಗತಿಗೆ ವಿನೂತನ ಕಾರ್ಯವನ್ನು ಹಮ್ಮಿಕೊಂಡಿದ್ದು, ಕಲಿಕೆಯಲ್ಲಿ ಹಿಂದುಳಿದ ಮಕ್ಕಳ ಮನೆಗೆ ನಾನೇ ಸ್ವತಃ ಭೇಟಿ ನೀಡುತ್ತೇನೆ. ಮಗುವಿನ ಶೈಕ್ಷಣಿಕ ಚಟುವಟಿಕೆಯ ಪ್ರಗತಿ ವರದಿಯನ್ನು ನೀಡುವಂತೆ ಶಿಕ್ಷಕರಿಗೂ ಸೂಚಿಸಿದ್ದೇನೆ ಎಂದರು.



293 ಮಕ್ಕಳು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಿಂದ ದೂರ ಉಳಿಯುತ್ತಾರೆಂದರೆ ಏನರ್ಥ? ಅವರ ಮನೆಗಳಿಗೆ ಭೇಟಿ ನೀಡಿ ಪರೀಕ್ಷೆ ಬರೆಯಲು ಉತ್ತೇಜನ ನೀಡಿ. ಅವರೇನೂ ಗುಳೆ ಹೋಗಿಲ್ಲ. ಸರಕಾರ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ಕೊಟ್ಟಿದೆ ಎನ್ನುವುದನ್ನು ಎಲ್ಲರೂ ಅರಿಯಬೇಕು. ಈ ಕೂಡಲೇ ಕಾರ್ಯಪ್ರವೃತ್ತರಾಗಿ ಎಂದು ಆಡಳಿತಾಧಿಕಾರಿ ಪ್ರಶಾಂತ ವರಗಪ್ಪನವರ್ ಬಿಇಒ ರುದ್ರಪ್ಪ ಹುರಳಿಯವರಿಗೆ ಸೂಚಿಸಿದರು.

ಇನ್ನು ಬೇಸಿಗೆ ಸಮಯದಲ್ಲಿ ಕುಡಿಯುವ ನೀರಿನ ತೊಂದರೆ-ಯಾಗದಂತೆ ನಿಗಾ ವಹಿಸಬೇಕು ಎಂದು ಪ್ರಶಾಂತ ವರಗಪ್ಪನವರ್ ಎಂಆರ್‌ಬಿಸಿ ಇಇ ಪ್ರಭಾಕರವರಿಗೆ ಸೂಚಿಸಿದರು. ಮಳೆ ಕೊರತೆಯಿಂದ ಮಲಪ್ರಭಾ ನದಿಯಲ್ಲಿ 14 ಟಿಎಂಸಿ ನೀರು ಸಂಗ್ರಹವಿದ್ದು, ಕುಡಿಯುವ ನೀರಿಗೆಂದು ಪೂರೈಕೆ ಮಾಡಿದ್ದರೂ ಸಹ ಹುಬ್ಬಳ್ಳಿ ಹಾಗೂ ನವಲಗುಂದ ರೈತರು ಬಳಕೆ ಮಾಡಿಕೊಳ್ಳುತ್ತಾರೆ. ಹೀಗಾಗಿ ನೀರು ರೋಣ ಪಟ್ಟಣಕ್ಕೆ ತಲುಪುತ್ತಿಲ್ಲ. ಇದರಿಂದ ನಮಗೆ ಸಮಸ್ಯೆಯಾಗುತ್ತಿದೆ ಎಂದರು. ಆಗ ಮಧ್ಯೆ ಪ್ರವೇಶಿಸಿದ ಪ್ರಶಾಂತ ವರದಪ್ಪನವರ, ಈ ವಿಷಯವನ್ನು ಜಿಲ್ಲಾಧಿಕಾರಿಗಳ ಗಮನಕ್ಕೆ ತರಲಾಗುವುದು ಎಂದು ತಿಳಿಸಿದರು. ಇಒ ರವಿ ಎ.ಎನ್. ಸೇರಿದಂತೆ ತಾಲೂಕಾ ಮಟ್ಟದ ಅಧಿಕಾರಿಗಳು ಹಾಜರಿದ್ದರು.

ಹೊಸದಾಗಿ ನೇಮಕಗೊಂಡ ಶಿಕ್ಷಕರ ಬಗ್ಗೆ ನನ್ನ ಬಳಿ ಯಾವುದೇ ಮಾಹಿತಿಯಿಲ್ಲ. ಈ ಬಾರಿ ಅವರು ಡಿಡಿಪಿಐರವರಿಂದ ನೇರವಾಗಿ ನೇಮಕಗೊಂಡು ಶಾಲೆಗೆ ತೆರಳಿ ಕರ್ತವ್ಯಕ್ಕೆ ಹಾಜರಾಗಿದ್ದಾರೆ. ಸಭೆಗೆ ಡಿಡಿಪಿಐರವರು ನಮ್ಮನ್ನು ಕರೆದಿಲ್ಲ.

– ರುದ್ರಪ್ಪ ಹುರಳಿ.
ಬಿಇಒ, ರೋಣ.

## ಇಂಟರ್‌ಸಿಟಿ ರೈಲು ಪುನಃ ಪ್ರಾರಂಭಿಸಿ

■ವಿಜಯಸಾಕ್ಷಿ ಸುದ್ದಿ, ಗದಗ

ವಿಜಯಪುರ-ಹುಬ್ಬಳ್ಳಿ ಇಂಟರ್‌ಸಿಟಿ ರೈಲು ಗಾಡಿ (ನಂ-07330) ಮತ್ತು ಹುಬ್ಬಳ್ಳಿಯಿಂದ ವಿಜಯಪುರ (ನಂ-07330) ರೈಲನ್ನು ನ.30ವರೆಗೆ ಹುಬ್ಬಳ್ಳಿ ರೈಲು ವಿಭಾಗವು ಸ್ಥಗಿತಗೊಳಿಸಿದೆ. ಈ ರೈಲು ಸ್ಥಗಿತಗೊಂಡಿರುವದರಿಂದ ವಿಜಯಪುರ, ಬಾಗಲಕೋಟೆ, ಗದಗವರೆಗೆ ದಿನನಿತ್ಯ ಓಡಾಡುವ ಪ್ರಯಾಣಿಕರಿಗೆ ಅನಾನುಕೂಲವಾಗುತ್ತಿದೆ.

ವಿಜಯಪುರ-ಬಾಗಲಕೋಟೆಯ ವ್ಯಾಪಾರಸ್ಥರು, ಸಾರ್ವಜನಿಕರು ಗದಗ-ಹುಬ್ಬಳ್ಳಿ ಹೋಗಿ ವ್ಯಾಪಾರ ಮಾಡಿಕೊಂಡು, ಮರಳಿ ಸ್ವಸ್ಥಳಗಳಿಗೆ ಪ್ರಯಾಣಿಸಲು ಅನುಕೂಲಕರವಾಗಿದೆ. ಬೆಳಗ್ಗೆ 5-45ಕ್ಕೆ ವಿಜಯಪುರದಿಂದ ಹೊರಡುವ ಇಂಟರ್‌ಸಿಟಿ ರೈಲು ನೌಕರರರು, ಪ್ರಯಾಣಿಕರು, ವ್ಯಾಪಾರಸ್ಥರಿಗೆ ಅನುಕೂಲಕರವಾದ ಸೇವೆಯನ್ನು ಒದಗಿಸುತ್ತದೆ. ಜೊತೆಗೆ ಇದೇ ಇಂಟರ್‌ಸಿಟಿ ರೈಲು ಮರಳಿ ಸಂಜೆ 4.45ಕ್ಕೆ ಹುಬ್ಬಳ್ಳಿಯಿಂದ ವಿಜಯಪುರಕ್ಕೆ ಹೊರಡುವದರಿಂದ ವ್ಯಾಪಾರಸ್ಥರು, ನೌಕರರು, ಸಾರ್ವಜನಿಕರಿಗೆ ಪ್ರಯಾಣಕ್ಕೆ ಸೂಕ್ತವಾಗಿದೆ. ಹೀಗಾಗಿ, ಡಿ.1ರಿಂದ ಇಂಟರ್‌ಸಿಟಿ ರೈಲನ್ನು ಪುನಃ ಪ್ರಾರಂಭಿಸಬೇಕೆಂದು ಪ್ರಯಾಣಿಕರು ಹುಬ್ಬಳ್ಳಿ ವಿಭಾಗೀಯ ರೈಲ್ವೆ ಅಧಿಕಾರಿಗಳಲ್ಲಿ ಆಗ್ರಹಿಸಿದ್ದಾರೆ.

## ಸರ್ಕಾರದ ಸೌಲಭ್ಯಗಳು ಅರ್ಹರಿಗೆ ತಲುಪಲೇಬೇಕು

▶▶ಮೊದಲನೇ ಪುಟದಿಂದ

ತಾಪಂ ಇಓ ಡಾ. ಎನ್.ಎಚ್. ಓಲೇಕಾರ, ಸಮಾಜ ಕಲ್ಯಾಣಾಧಿಕಾರಿ ಶರಣಯ್ಯ ಕುಲಕರ್ಣಿ, ಎಡಿಎಚ್ ಸುರೇಶ ಕುಂಬಾರ, ಎಡಿಎ ರೇವಣೆಪ್ಪ ಮನಗೂಳಿ, ಬಿಇಓ ಜಿ.ಎಂ. ಮುಂದಿನಮನಿ, ಬಿಸಿಎಂನ ಎಂ.ಎಚ್. ಸುರಕೋಡ, ಪಿಆರ್‌ಇಡಿ ಎಇ ಸಂತೋಷ ಲಮಾಣಿ, ಸಿಡಿಪಿಓ ಮೃತ್ಯುಂಜಯ ಗುಡ್ಡದ ಆನ್ವೇರಿ ಮುಂತಾದವರು ಉಪಸ್ಥಿತರಿದ್ದರು.

### ಗದಗ ಭಾವಸಾರ ವ್ಹಿಜನ್‌ನಿಂದ ವಿದ್ಯಾರ್ಥಿಗಳಿಗೆ ರಕ್ತಗುಂಪು ತಪಾಸಣಾ ಶಿಬಿರ

# ಮಕ್ಕಳು ಸತ್ವಯುತ ಆಹಾರ ಸೇವಿಸಲಿ

■ವಿಜಯಸಾಕ್ಷಿ ಸುದ್ದಿ, ಗದಗ

ಸತ್ವಯುತ ಆಹಾರ ಸೇವನೆ, ನಿಯಮಿತ ವ್ಯಾಯಾಮ ಪದ್ಧತಿ, ಸರಿಯಾದ ಆರೋಗ್ಯ ನಿಯಮಗಳನ್ನು ಮಕ್ಕಳು ಹಿರಿಯರ ಮಾರ್ಗದರ್ಶನದಲ್ಲಿ ಪಾಲಿಸಿದರೆ ಆರೋಗ್ಯವು ಸದೃಢವಾಗುವುದಲ್ಲದೆ ರಕ್ತಹೀನತೆ ದೂರವಾಗುತ್ತದೆ ಎಂದು ರಕ್ತಪಾಸಿಗ ಡಾ.ದತ್ತಾತ್ರೇಯ ವೈಕುಂಠೆ ಅಭಿಪ್ರಾಯಪಟ್ಟರು.

ಅವರು ಗದುಗಿನ ಬಸ್‌ನಿಲ್ದಾಣ ಬಳಿ ಇರುವ ಉರ್ದು ಪ್ರಾಥಮಿಕ ಹಾಗೂ ಪ್ರೌಢಶಾಲೆಯಲ್ಲಿ ಗದಗ ಭಾವಸಾರ ವ್ಹಿಜನ್‌ನಿಂದ ಶಾಲಾ ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದ ರಕ್ತಗುಂಪು ತಪಾಸಣಾ ಶಿಬಿರದಲ್ಲಿ ರಕ್ತಪಾಸಣೆಯ ಗುರುತಿನ ಚೀಟಿ ವಿತರಿಸಿ ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ಸಮನ್ವಯಾಧಿಕಾರಿ ಎಸ್.ಎಸ್. ಫಾರೂಖಿ ಮಾತನಾಡಿ, ಸಮಯ ಸಂದರ್ಭಗಳು ಅನಿರೀಕ್ಷತವಾಗಿ ಎದುರಾದಾಗ ನಾವು ಸಂದಿಗ್ದತೆಗೆ ಒಳಗಾಗುತ್ತೇವೆ. ಹಾಗೆಯೇ ರಕ್ತದ ಗುಂಪು ನಮಗೆ ತಿಳಿದಿದ್ದಲ್ಲಿ ಕೆಲವು ಸಂದರ್ಭಗಳಲ್ಲಿ ತಕ್ಷಣವೇ ನಮ್ಮ ಸಹಾಯಕ್ಕೆ ಬರುತ್ತದೆ ಎಂದರು.




ಸಮನ್ವಯ ಶಿಕ್ಷಣದ ಸಂಪನ್ಮೂಲ ವ್ಯಕ್ತಿ ಕೆ.ಎಸ್. ಬೇಲೇರಿ ಮಾತನಾಡಿ, ಡಾ. ವೈಕುಂಠೆ ಅವರು ಈಗಾಗಲೇ ಗದಗ ಶಹರದ ಹಲವಾರು ಶಾಲೆಗಳಲ್ಲಿ ಉಚಿತ ರಕ್ತತಪಾಸಣಾ ಶಿಬಿರಗಳನ್ನು ನಡೆಸಿದ್ದು, ಗದಗ ತಾಲೂಕಿನಾದ್ಯಂತ ಎಲ್ಲ ಶಾಲೆಗಳಲ್ಲಿ ಶಿಬಿರಗಳನ್ನು ನಡೆಸಲು ಮುಂದಾಗಿದ್ದಾರೆ ಎಂದರು.

ಶಿಬಿರದಲ್ಲಿ ಉರ್ದು ಪ್ರಾಥಮಿಕ ಹಾಗೂ ಪ್ರೌಢಶಾಲೆಯ ವಿದ್ಯಾರ್ಥಿನಿಯರಲ್ಲದೆ ಪಾಲಕ-ಪೋಷಕರು ಸೇರಿದಂತೆ ಸುಮಾರು 300ಕ್ಕೂ ಹೆಚ್ಚು ಜನರ ರಕ್ತಗುಂಪು ತಪಾಸಣೆ ಮಾಡಿ ಚೀಟಿ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಶ್ರೀಕಾಂತ ಬಡ್ಡೂರ, ಎಂ.ಎಸ್. ಮಕಾನದಾರ, ಎ.ಎಸ್. ಶಿವಳ್ಳಿ, ಸಾರಿಯಾ ಬರ್ಜಿಸ್, ಕೆ.ಎಸ್. ಕೊಪ್ಪಳ, ಎಸ್.ಎ. ಕುಂಬಾರ, ಕಿರಣ್ ರಾಮಜೀ, ರಾಜೇಶ್ವರಿ ಭಂಡಾರಿ ಉಪಸ್ಥಿತರಿದ್ದರು.

# ನಮ್ಮದು ಜಗತ್ತಿನಲ್ಲಿಯೇ ಶ್ರೇಷ್ಠ ಸಂವಿಧಾನ

■ವಿಜಯಸಾಕ್ಷಿ ಸುದ್ದಿ, ಗದಗ

ಭವ್ಯ ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯು ಜಗತ್ತಿನಲ್ಲಿಯೇ ಶ್ರೇಷ್ಠ ಸಂವಿಧಾನ ಹೊಂದಿದೆ. ವಿವಿಧತೆಯಲ್ಲಿ ಏಕತೆ ಸಾರುವ ಭಾರತೀಯ ಸಂಸ್ಕೃತಿ ವಿಶ್ವಕ್ಕೆ ಮಾದರಿಯಾಗಿದೆ ಎಂದು ಕೆ.ಎಸ್. ಬೇಲೇರಿ ಹೇಳಿದರು.

ಅವರು ಸೋಮವಾರ ಗದುಗಿನ ಸರಕಾರಿ ಹಿರಿಯ ಪ್ರಾಥಮಿಕ ಗಂಡುಮಕ್ಕಳ ಶಾಲೆ ನಂ.2ರಲ್ಲಿ ಜರುಗಿದ ಭಾರತದ ಸಂವಿಧಾನ ದಿನ ಹಾಗೂ ವಿಶೇಷ ಚೇತನ ಮಕ್ಕಳ ವಿಶೇಷ ಭತ್ಯೆಯ ಚೆಕ್ ವಿತರಣಾ ಸಮಾರಂಭದ ಅತಿಥಿಯಾಗಿ ಮಾತನಾಡಿದರು.



ಸಂವಿಧಾನದ ಮೌಲ್ಯಗಳಾದ ಸಮಾನತೆ ಹಾಗೂ ಸ್ವಾತಂತ್ರ್ಯ, ಜಾತ್ಯಾತೀತತೆ, ಐಕ್ಯತೆ ಹಾಗೂ ಏಕತೆಗಳನ್ನು ನಾವೆಲ್ಲರೂ ಕಟ್ಟುನಿಟ್ಟಾಗಿ ಪಾಲಿಸುವದು ಆದ್ಯ ಕರ್ತವ್ಯವಾಗಿದೆ. ವಿಶೇಷ ಚೇತನ ಮಕ್ಕಳಿಗೆ ಪ್ರೀತಿಯ ಆರೈಕೆಯ ಜೊತೆಗೆ ಮಕ್ಕಳು ಮುಖ್ಯವಾಹಿನಿಗೆ ಬರುವಲ್ಲಿ ಎಲ್ಲರೂ ಶ್ರಮಿಸೋಣ ಎಂದರು.

ಅಧ್ಯಕ್ಷತೆ ವಹಿಸಿದ್ದ ಮುಖ್ಯೋಪಾಧ್ಯಾಯೆ ಎಸ್.ಎಸ್. ತೆರದಾಳ, ವಿಶೇಷ ಚೇತನ ಮಕ್ಕಳ ವಿಶೇಷ ಭತ್ಯೆಯ ಚೆಕ್ ವಿತರಿಸಿದ ಶಾಲಾ ಎಸ್‌ಡಿಎಂಸಿ ಅಧ್ಯಕ್ಷ ಬಸವರಾಜ ದಂಡಿನ, ಸಂಪನ್ಮೂಲ ವ್ಯಕ್ತಿ ವಿ.ಟಿ. ದಾಸರಿ ಪ್ರಾಸ್ತಾವಿಕವಾಗಿ ಮಾತನಾಡಿದರು. ವ್ಹಿ.ಎಂ. ಚರಂತಿಮಠ ಸ್ವಾಗತಿಸಿ ನಿರೂಪಿಸಿದರು.

ವಿಶೇಷ ಚೇತನ ಮಕ್ಕಳ ಪಾಲಕರಾದ ಬಸಮ್ಮ ಕ್ಷತ್ರಿ, ವನಿತಾ ಹುಬ್ಬಳ್ಳಿ, ರೇಣುಕಾ ರಾಯಬಾಗ, ಯಲ್ಲಮ್ಮ ಬದಿ, ಗೀತಾ ಮಂಗಳೂರು, ಲಲಿತಾ ತಳವಾರ ಮುಂತಾದವರು ಕಾರ್ಯಕ್ರಮದಲ್ಲಿದ್ದರು.

## ಶೋಷಿತ ಸಮುದಾಯಗಳಿಗೆ ಹಕ್ಕು ಲಭ್ಯವಾಗಿಲ್ಲ



■ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ಮಾದಿಗ ಸಂಘರ್ಷ ಸಮಿತಿ ಗದಗ ಜಿಲ್ಲಾ ಘಟಕದ ವತಿಯಿಂದ ನಗರದ ತಳಗೇರಿ ಓಣಿಯಲ್ಲಿರುವ ಡಾ. ಬಿ.ಆರ್. ಅಂಬೇಡ್ಕರ್ ಅವರ ಮೂರ್ತಿಗೆ ಮಾಲಾರ್ಪಣೆ ಮಾಡಿ ಸಂವಿಧಾನ ದಿನಾಚರಣೆಯನ್ನು ಆಚರಿಸಲಾಯಿತು.

ಸಮಿತಿಯ ಗದಗ ಜಿಲ್ಲಾಧ್ಯಕ್ಷ ರಾಘವೇಂದ್ರ ಪರಾಪೂರ ಮಾತನಾಡಿ, ಇತ್ತೀಚಿನ ವರ್ಷಗಳಲ್ಲಿ ಡಾ. ಬಿ.ಆರ್. ಅಂಬೇಡ್ಕರರು ಶೋಷಿತ ಸಮುದಾಯಗಳಿಗೆ ನೀಡಿದ ಮೀಸಲಾತಿಯನ್ನು ಮೇಲ್ವರ್ಗದವರೂ ಪಡೆಯಲು ಮುಂದಾಗುತ್ತಿರುವುದು ನೋವಿನ ಸಂಗತಿಯಾಗಿದೆ. ನಿಜವಾದ ಶೋಷಿತ ಸಮುದಾಯಗಳು ಮೀಸಲಾತಿ ಸೌಲಭ್ಯಗಳಿಂದ ವಂಚಿತರಾಗುತ್ತಿದ್ದಾರೆ ಎಂದರು.

ಡಾ. ಬಿ.ಆರ್. ಅಂಬೇಡ್ಕರವರ ಬಗ್ಗೆ ಮತ್ತು ಸಂವಿಧಾನದ ಬಗ್ಗೆ ಮಾತನಾಡುವವರು ಈ ಶೋಷಿತ ಸಮುದಾಯಗಳ ಬಗ್ಗೆ ಚಿಂತಿಸಬೇಕಾಗಿರುವುದು ಅತೀ ಅವಶ್ಯವಾಗಿದೆ. ಸಂವಿಧಾನದಲ್ಲಿ ಬಡವ, ಶ್ರೀಮಂತ ಸೇರಿದಂತೆ ಎಲ್ಲ ವರ್ಗದವರಿಗೆ ಸಮಾನತೆ, ರಕ್ಷಣೆ ನೀಡಲಾಗಿದೆ ಎಂದರು.

ಈ ಸಂದರ್ಭದಲ್ಲಿ ಮಾದಿಗ ಸಮಾಜದ ಯುವಕರಾದ ಪರಶುರಾಮ್ ಸಂಗಾಪೂರ್, ಉಮೇಶ್ ಅಕ್ಕಿ, ಮರಿಯಪ್ಪ ಪರಾಪೂರ, ಮಂಜುನಾಥ್ ಕಟ್ಟಿಮನಿ, ವಿಶಾಲ್ ಆದಿಮನಿ, ಲಿಂಗರಾಜ್ ಗೌಡರ್, ಹನುಮಂತ ಸೊನ್ನದ್, ಶ್ರೀನಿವಾಸ್ ಆದಿಮನಿ, ವಿನಾಯಕ್ ಸಂಗಾಪೂರ, ರವಿ ಅಕ್ಷನ್ಕೊಪ್ಪ, ಮನೋಜ್ ಪೂಜಾರ್, ಅಭಿಷೇಕ್ ಸಂಗಾಪೂರ, ಶ್ರಾವಣ್ ಜಕ್ಕಲಿ, ವಿನಾಯಕ್ ಬಳ್ಳೂರು, ಅಶ್ವಿನಿ ಪರಾಪೂರ, ನಂದಿನಿ ಪರಾಪೂರ, ವಿಜಯಲಕ್ಷ್ಮೀ ಪರಾಪೂರ, ದುರ್ಗಾಶ್ರೀ ಪರಾಪೂರ ಮುಂತಾದವರು ಉಪಸ್ಥಿತರಿದ್ದರು.

# ಅತಿಥಿ ಉಪನ್ಯಾಸಕರ ಧರಣಿಗೆ ಸಿಡಿಸಿ ಸದಸ್ಯರ ಬೆಂಬಲ

■ವಿಜಯಸಾಕ್ಷಿ ಸುದ್ದಿ, ಕೊಪ್ಪಳ

ಸೇವಾ ಕಾಯಂಗೆ ಆಗ್ರಹಿಸಿ ವಾರದಿಂದ ನಡೆಯುತ್ತಿರುವ ಅತಿಥಿ ಉಪನ್ಯಾಸಕರ ಅನಿರ್ದಿಷ್ಟಾವಧಿ ಧರಣಿಗೆ ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯರು ಬೆಂಬಲ ಸೂಚಿಸಿದರು.

ನಗರದ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಆವರಣದಲ್ಲಿ ನಡೆಯುತ್ತಿರುವ. ಧರಣಿ ಸ್ಥಳಕ್ಕೆ ಮಂಗಳವಾರ ಭೇಟಿ ನೀಡಿದ ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯರಾದ ಮಂಜುನಾಥ ಗೊಂಡಬಾಳ, ಸಲೀಂ ಅಳವಂಡಿ, ಶ್ರೀನಿವಾಸ ಪಂಡಿತ್ ಹಾಗೂ ಗಂಗಾಧರ ಕಬ್ಬೇರ ಧರಣಿನಿರತ ಅತಿಥಿ ಉಪನ್ಯಾಸಕರಿಗೆ ಬೆಂಬಲ ನೀಡಿ ಕೆಲ ಕಾಲ ಧರಣಿಯಲ್ಲಿ ಪಾಲ್ಗೊಂಡರು.

ಮಂಜುನಾಥ ಗೊಂಡಬಾಳ ಮಾತನಾಡಿ, ಸರಕಾರಿ ಕಾಲೇಜುಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯನಿರ್ವಹಿಸುವವರು ನೀವೇ ಎಂಬುದು ನಮ್ಮ ಗಮನಕ್ಕಿದೆ. ನಿಮ್ಮ ಬೇಡಿಕೆ ಕುರಿತು ಕಾಂಗ್ರೆಸ್ ನಾಯಕರಿಗೆ ಪತ್ರ ಬರೆಯಲಾಗುವುದು. ಈ ಬಗ್ಗೆ ಅಧಿವೇಶನದಲ್ಲಿ ಚರ್ಚಿಸಿ, ನ್ಯಾಯ ಒದಗಿಸುವಂತೆ ಒತ್ತಾಯಿಸಲಾಗುವುದು ಎಂದರು.




ಸಲೀಂ ಅಳವಂಡಿ ಮಾತನಾಡಿ, ವಿದ್ಯಾರ್ಥಿಗಳ ಬದುಕು ರೂಪಿಸುವ ನೀವು ಬೀದಿಯಲ್ಲಿ ಧರಣಿ ನಡೆಸುತ್ತಿರುವುದು ನೋವಿನ ಸಂಗತಿ. ಈ ಬೆಳವಣಿಗೆಯನ್ನು ಸರಕಾರ ಗಮನಿಸುತ್ತಿದೆ. ನಿಮ್ಮ ಪರವಾಗಿ ಕೊಪ್ಪಳ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಅಭಿವೃದ್ಧಿ ಮಂಡಳಿ ಕೆಲಸ ಮಾಡುತ್ತದೆ ಎಂದು ಭರವಸೆ ನೀಡಿದರು.

### ಸಕಾರಾತ್ಮಕವಾಗಿ ಸ್ಪಂದಿಸಿದ ಸಚಿವರು

ಧರಣಿ ಸ್ಥಳಕ್ಕೆ ಆಗಮಿಸಿದ್ದ ಸಿಡಿಸಿ ಸದಸ್ಯ ಸಲೀಂ ಅಳವಂಡಿಯವರು ತಕ್ಷಣವೇ ಸಚಿವರನ್ನು ದೂರವಾಣಿ ಮೂಲಕ ಸಂಪರ್ಕಿಸಿ ಬೇಡಿಕೆ ಕುರಿತು ವಿವರಿಸಿದರು. ಸಚಿವರು ಅತಿಥಿ ಉಪನ್ಯಾಸಕರ ಪ್ರತಿನಿಧಿ ಜೊತೆ ಮಾತನಾಡಿ, ಡಿಸೆಂಬರ್ 1ರಂದು ಅತಿಥಿ ಉಪನ್ಯಾಸಕರ ಸಂಘಟನೆಯ ಮುಖಂಡರ ಜೊತೆ ಸಭೆ ನಿಗದಿಯಾಗಿದ್ದು, ಸಭೆಯಲ್ಲಿ ಚರ್ಚಿಸಲಾಗುತ್ತದೆ. ಪ್ರಣಾಳಿಕೆಯಲ್ಲಿ ಘೋಷಿಸಿದಂತೆ ಅತಿಥಿ ಉಪನ್ಯಾಸಕರ ಸೇವಾ ಭದ್ರತೆಗೆ ಸರಕಾರ ಕಟಿಬದ್ಧವಾಗಿದೆ ಎಂದು ಸಕಾರಾತ್ಮಕವಾಗಿ ಸ್ಪಂದಿಸಿದರು.

ಶ್ರೀನಿವಾಸ್ ಪಂಡಿತ, ಗಂಗಾಧರ ಕಬ್ಬೇರ ಮಾತನಾಡಿದರು. ಅತಿಥಿ ಉಪನ್ಯಾಸಕರ ಸಂಘದ ಹಿರಿಯ ಮುಖಂಡ ಡಾ.ಪ್ರಕಾಶ್ ಬಳ್ಳಾರಿ ನಿರೂಪಿಸಿದರು. ಅತಿಥಿ ಉಪನ್ಯಾಸಕ ಬಸವರಾಜ ಕರುಗಲ್ ವಂದಿಸಿದರು.

ಈ ಸಂದರ್ಭದಲ್ಲಿ ಬಸವರಾಜ್ ಕಲ್ಮನಿ, ಸಂಗಮೇಶ್ವರ್ ಸಿ, ಮಹಾಂತೇಶ್ ನೆಲಾಗಣಿ, ರಾಘವೇಂದ್ರ ಎನ್, ಡಾ. ಪ್ರಕಾಶ, ವೀರಭದ್ರಯ್ಯ ಸ್ವಾಮಿ, ಶಂಕರ್ ಅಡಿವಿಭಾವಿ, ಮಂಜುನಾಥ ಹನುಮಸಾಗರ್, ಕೊಟ್ರೇಶ್ ಜಿ.ಎಸ್, ಮಹಮ್ಮದ್ ಅಫೀ ಜುಲ್ಲಾ, ಎಚ್ ಕೆ ನೆರೆಗಲ್, ಬಾಬು ಸಾಬ, ವೆಂಕಟೇಶ್, ಸಿ ಬಸವರಾಜ್, ಎಚ್ ಎಸ್ ಪಾಟೀಲ್, ಡಾ. ನಾಗರಾಜ್ ದೊರೆ , ಮಾರುತಿ ನವೀನ್, ಆರತಿ ಬಿ, ಜ್ಞಾನೇಶ್ವರ ಪತ್ತಾರ, ಬಸಮ್ಮ, ವಿಜಯ ಲಕ್ಷ್ಮಿ, ಡಾ ಗೀತಾ ಮುತ್ತಾಳ್, ಕಲ್ಲಯ್ಯ ಪೂಜಾರ, ಸಂತೋಷ ಬೆಲ್ಲದ, ಅಶೋಕ್ ವೈ, ರಮೇಶ್ ಗುಜ್ಜಾರ, ಎಸ್. ಸಿ ಬಡಿಹಾಳ್, ವೀರಣ್ಣ ಸಜ್ಜನ , ಸಣ್ಣ ದೇವೇಂದ್ರ ಸ್ವಾಮಿ , ಶಿವಬಸಪ್ಪ ಮಸ್ಕಿ, ವಿಜಯ ತೋಟದ, ರವಿ ಹಿರೇಮಠ, ವಿಜಯ ಕುಲಕರ್ಣಿ, ಗಿರಿಜಾ, ಅಕ್ಕಮಹಾದೇವಿ, ಅನುರಾಧ, ಲತಾ, ಎಂ.ಶಿವಣ್ಣ, ಶಿವಮೂರ್ತೆಪ್ಪ ಮತ್ತಿತರರು ಇದ್ದರು.

## ಜೀವದಾತೆ ಪ್ರಕೃತಿಯನ್ನು ಸಂರಕ್ಷಿಸಿ

■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಪ್ರಕೃತಿ ಮಾತೆ ನೀಡುವ ಹಸಿರು ಮತ್ತು ಗಾಳಿ ನಮ್ಮ ಜೀವಕ್ಕೆ ಉಸಿರು. ಈ ಜೀವದಾತೆಯನ್ನು ಸಂರಕ್ಷಿಸುವ ಕಾರ್ಯ ನಮ್ಮೆಲ್ಲರಿಂದ ಆಗಬೇಕಿದೆ. ಯಾವುದೇ ಕಾರಣಕ್ಕೂ ಗಿಡ-ಮರಗಳನ್ನು ಕಡಿಯುವುದಾಗಲಿ, ಪ್ರಾಣಿಗಳನ್ನು ಕೊಲ್ಲುವುದಾಗಲಿ ಮಡಬಾರದು ಎಂದು ನರೇಗಲ್ಲದ ವೈದ್ಯ ಡಾ. ನಾಗರಾಜ ಗ್ರಾಮಪುರೋಹಿತ ಹೇಳಿದರು.

ನರೇಗಲ್ಲ ಪಟ್ಟಣದ ಎಸ್‌ಆರ್‌ಕೆ ಫಿಟ್ನೆಸ್ ಸಂಸ್ಥೆಯ ಪ್ರಥಮ ವಾರ್ಷಿಕೋತ್ಸವ ಸಮಾರಂಭದಲ್ಲಿ ಭೂತನಾಥೇಶ್ವರ ದೇವಸ್ಥಾನದ ಆವರಣದಲ್ಲಿ ಸಸಿ ನೆಡುವ ಕಾರ್ಯಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಕರ್ನಾಟಕ ಅಭಿವೃದ್ಧಿ ವೇದಿಕೆ ರಾಜ್ಯಾಧ್ಯಕ್ಷ ವಿನಾಯಕ ಜರತಾರಿ ಮಾತನಾಡಿ, ನಮ್ಮ ಸುತ್ತಲಿನ ಪರಿಸರ ನಮ್ಮ ಸಾಮಾಜಿಕ, ದೈಹಿಕ ಬೆಳವಣಿಗೆಗಳ ಮೇಲೆ ಪ್ರಭಾವ ಬೀರುತ್ತದೆ. ಆದ್ದರಿಂದ ಪರಿಸರ ರಕ್ಷಣೆಯು ನಮ್ಮೆಲ್ಲರ ಹೊಣೆಯಾಗಿದೆ ಎಂದರು.




ದೈಹಿಕ ಶಿಕ್ಷಕ ಆರ್.ಎಸ್. ನರೇಗಲ್ಲ, ಪತ್ರಕರ್ತ ನಿಂಗರಾಜ ಬೇವಿನಕಟ್ಟಿ, ಮಹೇಶ ದಢೇಸೂರಮಠ, ವಿನಾಯಕ ಹೂಗಾರ ಮಾತನಾಡಿದರು.

ಈ ಸಂದರ್ಭದಲ್ಲಿ ಮಹಮ್ಮದ ನಶೇಖಾನ, ರೈಮಾನಸಾಬ ಮಾರನಬಸರಿ, ನ್ಯಾಯವಾದಿ ಸಿದ್ದು ಗುಮ್ಮಗೋಳಮಠ, ಚನ್ನವೀರ ಕೋಟುಮಚಗಿ, ಗೋಪಿ, ಸಂತೋಷ ಭೂಮನಗೌಡ್ರ, ಗಂಗಾದರ ಮಡಿವಾಳರ, ಯೂಸುಫ್ ರಾಹುತ್, ಫಯಾಜ್ ನದಾಫ್, ರೈಮಾನ ಹೊಸಮನಿ, ರಾಘು ಕೊನ್ನೂರಕರ, ಪ್ರಕಾಶ ರಾಠೋಡ, ಸದದಾಂ ನಶೇಖಾನ ಮತ್ತಿತರರಿದ್ದರು.

# ಜಾನುವಾರುಗಳು ರೈತರ ಜೀವನಾಡಿ



**■ವಿಜಯಸಾಕ್ಷಿ ಸುದ್ದಿ, ಮುಳಗುಂದ**

ಜಾನುವಾರುಗಳು ರೈತರ ಜೀವನಾಡಿಯಾಗಿದ್ದು, ಅವುಗಳ ಆರೋಗ್ಯ ಕಾಪಾಡಿಕೊಳ್ಳುವುದು ಅವಶ್ಯಕವಾಗಿದೆ ಎಂದು ಗದಗ ಕೃಷಿ ಇಲಾಖೆಯ ಉಪನಿರ್ದೇಶಕಿ ಜಿ.ಎಸ್. ಸ್ಫೂರ್ತಿ ಹೇಳಿದರು.

ಅವರು ಪಟ್ಟಣ ಸಮೀಪದ ಹೊಸೂರ ಗ್ರಾಮದಲ್ಲಿ ಕೃಷಿ ಇಲಾಖೆಯ ರಿವಾರ್ಡ್ ಯೋಜನೆಯಡಿ ಜಾನುವಾರುಗಳ ಉಚಿತ ಆರೋಗ್ಯ ತಪಾಸಣಾ ಶಿಬಿರ ಉದ್ಘಾಟಿಸಿ ಮಾತನಾಡಿ, ಜಾನುವಾರುಗಳು ಇಲ್ಲದಿದ್ದಲ್ಲಿ ಕೃಷಿ ಚಟುವಟಿಕೆ ಮಾಡಲು ಹಾಗೂ ಸಾವಯವ ಕೃಷಿ ಮಾಡಲು ಸಾಧ್ಯವೇ ಇಲ್ಲ. ಹೀಗಾಗಿ, ಅವುಗಳಿಗೆ ತಗಲುವ ಸಾಂಕ್ರಾಮಿಕ ರೋಗಗಳನ್ನು ಪ್ರಾಥಮಿಕ ಹಂತದಲ್ಲೇ ತಡೆಗಟ್ಟಬೇಕು. ಇದರಿಂದ ಜಾನುವಾರುಗಳನ್ನು ಸಂತತಿಯನ್ನು ಕಾಪಾಡುವುದರ ಜತೆಯಲ್ಲಿ ಅವುಗಳ ರಕ್ಷಣೆ ಮಾಡಿದಂತೆಯಾಗುತ್ತದೆ. ರೈತರು ಈ ಶಿಬಿರದ ಸದುಪಯೋಗವನ್ನು ಪಡೆದುಕೊಳ್ಳಬೇಕು ಎಂದರು.

ಗದಗ ಕೃಷಿ ಸಹಾಯಕ ನಿರ್ದೇಶಕ ಮಲಯ್ಯ ಕೊರವನವರ, ವೈದ್ಯಾಧಿಕಾರಿ ಡಾ. ಎಸ್.ಎಸ್. ಹೋಸಮಠ, ಮುಳಗುಂದ ಕೃಷಿ ಸಹಾಯಕ ಅಧಿಕಾರಿ ಎಫ್.ಸಿ. ಗುರಿಕಾರ, ಗ್ರಾ.ಪಂ ಉಪಾಧ್ಯಕ್ಷ ದಾವಲಬಿ ನದಾಫ್, ಪಾರ್ವತೆಮ್ಮಾ ಕಲ್ಯಾಣಿ, ಸುಮಂಗಲಾ ದುಗಾಣಿ, ಭೀಮಣ್ಣಾ ಕುರ್ತಕೋಟಿ, ಶಿವಯ್ಯ ಮನಗನಿ, ರಮೇಶ ಬಶೆಟ್ಟಿ, ಯಲ್ಲಪ್ಪ ಕಲ್ಯಾಣಿ, ದ್ರಾಕ್ಷಾಯಣಿ ಕುರ್ತಕೋಟಿ, ಬೂದಪ್ಪ ರೋಣದ, ಆಕಾಶ ಪಿರಂಗಿ ಹಾಗೂ ರೈತ ಬಾಂಧವರು ಇದ್ದರು.

### ಮ.ಸಾ.ಪ ಶಿಗ್ಲಿ ಹೋಬಳಿ ಘಟಕದಿಂದ ಜಿಲ್ಲಾ ಮಟ್ಟದ 'ಮಕ್ಕಳ ಸಾಹಿತ್ಯ ಸಂಭ್ರಮ'

# ಸ್ವತಂತ್ರ ಭಾಷೆ ಬಳಸುವ ಜಾಣ್ಮೆ ಮಕ್ಕಳಲ್ಲಿ ಮೂಡಲಿ

**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಕನ್ನಡ ಭಾಷೆ, ನೆಲ-ಜಲ, ಸಾಹಿತ್ಯ ಸೇರಿ ನಾಡಿನ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಹೆಚ್ಚಿಸುವ ಗುರುತರ ಜವಾಬ್ದಾರಿ ನಮ್ಮದಾಗಿದೆ. ಕನ್ನಡದ ರಸಸ್ವಾದವನ್ನು ಇಮ್ಮಡಿಗೊಳಿಸುವ ಪ್ರಯತ್ನದತ್ತ ಹೆಜ್ಜೆ ಹಾಕೋಣ. ಕನ್ನಡ ಭಾಷೆ, ನೆಲ-ಜಲದ ಬಗ್ಗೆ ಅಭಿಮಾನಿಗಳಷ್ಟೇ ಅಲ್ಲದೆ, ಸ್ವಾಭಿಮಾನಿಗಳಾಗೋಣ. ಆ ದಿಸೆಯಲ್ಲಿ ಮುನ್ನಡೆಯುವ ಸಂಕಲ್ಪ ಮಾಡೋಣ ಎಂದು ವಿದ್ಯಾರ್ಥಿನಿ ಸವಿತಾ ಹವಳದ ನುಡಿದರು.

ತಾಲೂಕಿನ ಶಿಗ್ಲಿಯ ಸರಕಾರಿ ಮಾದರಿ ಪ್ರಾಥಮಿಕ ಹೆಣ್ಣು ಮಕ್ಕಳ ಶಾಲೆಯಲ್ಲಿ ಮಂಗಳವಾರ ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಮಕ್ಕಳ ಸಾಹಿತ್ಯ ಪರಿಷತ್ತಿನ ಲಕ್ಷ್ಮೇಶ್ವರ ತಾಲೂಕಿನ ಶಿಗ್ಲಿ ಹೋಬಳಿ ಘಟಕದಿಂದ ನಡೆದ ಜಿಲ್ಲಾ ಮಟ್ಟದ 'ಮಕ್ಕಳ ಸಾಹಿತ್ಯ ಸಂಭ್ರಮ' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.




ಅಧ್ಯಕ್ಷತೆ ವಹಿಸಿದ್ದ ಕಸಾಪ ಜಿಲ್ಲಾಧ್ಯಕ್ಷ ವಿವೇಕಾನಂದಗೌಡ ಪಾಟೀಲ ಮಾತನಾಡಿ, ಮಕ್ಕಳಲ್ಲಿ ಕೇಳಿ ಕಲಿಯುವ ಅಭಿರುಚಿಗಿಂತ ಸ್ವತಃ ಮಾಡಿ ಕಲಿಯುವುದರಿಂದ ಕಲಿಕೆ ಪರಿಣಾಮಕಾರಿಯಾಗಿರುತ್ತದೆ. ಕನ್ನಡ ಸಾಹಿತ್ಯದ ವಿವಿಧ ಮಜಲುಗಳಾದ ಹಾಡು, ಕಥೆ, ಚಿತ್ರ, ಆಟದ ಮೂಲಕ ಸಾಹಿತ್ಯದ ಸವಿರುಚಿ ಉಣಬಡಿಸುವ ವೇದಿಕೆ, ಅವಕಾಶ, ಪೂರಕ ವಾತಾವರಣ ಕಲ್ಪಿಸಬೇಕಾಗಿದೆ. ಮಕ್ಕಳಿಂದಲೇ ಕನ್ನಡದಲ್ಲಿ ಹೊಸ ಶಬ್ದ, ಭಾಷೆ ಉತ್ಪಾದನೆಯಾಗಬೇಕು. ಸೃಜನಶೀಲವಾಗಿ ಭಾಷೆ ಬೆಳೆಯಬೇಕಾದರೆ ಸ್ವತಃ ಸ್ವತಂತ್ರ ಭಾಷೆ ಬಳಸುವ ಜಾಣ್ಮೆ ಮಕ್ಕಳಲ್ಲಿ ಬೆಳೆಯಬೇಕು. ಗ್ರಾಮೀಣ ಭಾಗದಲ್ಲಿ ಜಿಲ್ಲಾ ಮಟ್ಟದ ಕಾರ್ಯಕ್ರಮ ಆಯೋಜಿಸುತ್ತಿರುವುದು ಶ್ಲಾಘನೀಯ ಎಂದರು.

> ಜಿಲ್ಲಾ ಮಸಾಪ ಅಧ್ಯಕ್ಷ ರಾಜೇಂದ್ರ ಗಡಾದ ಮಾತನಾಡಿ, ಮಕ್ಕಳು ಭೂಮಿಯ ಮೇಲೆ ನಳನಳಿಸುವ ಹೂಗಳಿಂದ್ದಂತೆ. ಆದರೆ ಪ್ರಸ್ತುತ ಮೊಬೈಲ್, ಟಿವಿ, ಕಂಪ್ಯೂಟರ್ ಪ್ರಭಾವದಿಂದ ಮಕ್ಕಳ ಆಸೆ, ಕನಸು, ಸೃಜನಶೀಲತೆ ಕಮರುತ್ತಿವೆ. ಮತ್ತೆ ಅವರಲ್ಲಿ ಹೊಸ ಕನಸುಗಳನ್ನು ಬಿತ್ತಿ ಅರಳಿಸಬೇಕಿದೆ. ಪಠ್ಯ ಶಿಕ್ಷಣದೊಂದಿಗೆ ಪಠ್ಯೇತರ ಚಟುವಟಿಕೆಗಳಾದ ಜಾನಪದ ಹಾಡು, ಗ್ರಾಮೀಣ ಕ್ರೀಡೆಗಳಲ್ಲಿ ತೊಡಗಿಸಿಕೊಳ್ಳಬೇಕು. ಅಂದಾಗ ಮಾತ್ರ ಮಕ್ಕಳ ಸಾಹಿತ್ಯ ಕ್ಷೇತ್ರ ಹರಿಯುವ ನೀರಿನಂತೆ ಪ್ರವಹಿಸಲು ಸಾಧ್ಯ ಎಂದರು.

ಮಸಾಪ ತಾಲೂಕಾಧ್ಯಕ್ಷ ನಾಗರಾಜ ಹಣಗಿ ಮಕ್ಕಳು ಬಾಲ್ಯದ ಸವಿ ಅನುಭವಿಸಬೇಕು ಎಂದರು. ಬಿಇಓ ಜಿ.ಎಂ. ಮುಂದಿನಮನಿ, ಕಸಾಪ ತಾಲೂಕಾಧ್ಯಕ್ಷ ಈಶ್ವರ ಮೆಡ್ಲೇರಿ, ಸಾಹಿತಿ ಸಿ.ಜಿ. ಹಿರೇಮಠ ಸೋಮಣ್ಣ ಡಾಣಗಲ್, ರಾಮಣ್ಣ ಲಮಾಣಿ, ಡಿ.ವೈ. ಹುನಗುಂದ ಮಾತನಾಡಿದರು.

ಗ್ರಾ.ಪಂ ಅಧ್ಯಕ್ಷೆ ದುಂಡವ್ವ ಹಾದಿಮನಿ, ಉಪಾಧ್ಯಕ್ಷೆ ಶೈಲಾ ಜನಿವಾರದ, ಮಹಾದೇವಿ ತಳವಾರ, ಗುಲ್ಜಾರಿಬಾನು ಶೇಖ, ಸೋಮಣ್ಣ ಡಾಣಗಲ್, ಯಲ್ಲಪ್ಪ ತಳವಾರ, ಎಂ.ಬಿ. ಹೊಸಮನಿ, ಡಿ.ಎಫ್. ಪಾಟೀಲ, ಕಸಾಪ ಹೋಬಳಿ ಘಟಕದ ಅಧ್ಯಕ್ಷ ರಾಜು ರಜಪೂತ, ಡಿ.ಎಚ್. ಪಾಟೀಲ, ವೀರಣ್ಣ ಅಳ್ಳಳ್ಳಿ ಸೇರಿದಂತೆ ಗ್ರಾ.ಪಂ ಸದಸ್ಯರು, ಗಣ್ಯರು, ವಿವಿಧ ಶಾಲೆಗ ನೂರಾರು ಮಕ್ಕಳು ಉಪಸ್ಥಿತರಿದ್ದರು. ಕಸಾಪ ಗ್ರಾಮ ಘಟಕದ ಗೌರವಾಧ್ಯಕ್ಷ ಪ್ರವೀಣ ಹುಲಗೂರ ಆಶಯನುಡಿಗೈದರು.

ಒಡೆಯರ ಮಲ್ಲಾಪುರ ಮುರಾರ್ಜಿ ವಸತಿ ಶಾಲೆಯ ವಿದ್ಯಾರ್ಥಿಗಳು ನಾಡಗೀತೆ, ಕನ್ನಡ ಗೀತೆಗಳನ್ನು ಪ್ರಸ್ತುತಪಡಿಸಿದರು. ಎನ್.ಎಂ. ಅರಳಿ, ಎಂ.ಸಿ. ಗೋಣೆಪ್ಪನವರ, ಮಂಜುನಾಥ ಶಂಭೋಜಿ, ಎನ್.ಡಿ. ಮೇಗಲಮನಿ ನಿರೂಪಿಸಿದರು.

# ಎಸ್‌ಎಸ್‌ಕೆ ಸಮಾಜ ಜಾಗೃತಿ ಕಾರ್ಯಕ್ರಮ

**■ವಿಜಯಸಾಕ್ಷಿ ಸುದ್ದಿ, ಗದಗ**

ನಗರದ ಎಸ್‌ಎಸ್‌ಕೆ ಪಂಚ ಕಮಿಟಿ ಮಹಿಳಾ ಮಂಡಳ, ತರುಣ ಸಂಘ, ಶ್ರೀ ಸಹಸ್ರಾರ್ಜುನ ಮಹಾರಾಜರ ಉತ್ಸವ ಸಮಿತಿಯ ವತಿಯಿಂದ ಶ್ರೀ ಸಹಸ್ರಾರ್ಜುನ ಮಹಾರಾಜರ ಜಯಂತ್ಯುತ್ಸವದ ಅಂಗವಾಗಿ ಎಸ್‌ಎಸ್‌ಕೆ ಸಮಾಜ ಜಾಗೃತಿ ಕಾರ್ಯಕ್ರಮದಲ್ಲಿ 400ಕ್ಕೂ ಹೆಚ್ಚು ಯುವತಿಯರಿಗೆ ಲವ್ ಜಿಹಾದ್‌ಗೆ ಬಲಿಯಾಗದಂತೆ, ಅನ್ಯ ಧರ್ಮೀಯ ಪ್ರೀತಿ-ಸ್ನೇಹ ಧಿಕ್ಕರಿಸುವಂತೆ ಪ್ರಮಾಣವಚನ ಮಾಡಿಸಲಾಯಿತು. ಕಾರ್ಯಕ್ರಮದ ನೇತೃತ್ವವನ್ನು ಕ್ರಾಂತಿ ಸೇನಾ ಗದಗ ಜಿಲ್ಲಾಧ್ಯಕ್ಷ ಬಾಬು ಬಾಕಳೆ ವಹಿಸಿದ್ದರು.



ಈ ಸಂದರ್ಭದಲ್ಲಿ ಬಾಬು ಬಾಕಳೆ ಮಾತನಾಡಿ, ಹಿಂದೂ ಸಮಾಜದ ಯುವತಿಯರಿಗೆ ಮೋಸ ಮಾಡಿ ಪ್ರೀತಿ ಪ್ರೇಮದ ಬಲೆಗೆ ಬಳಸಿಕೊಂಡು ಮತಾಂತರ ಮಾಡುವ ಷಡ್ಯಂತ್ರ ನಡೆಯುತ್ತಿದೆ. ಇದರಿಂದ ಯುವತಿಯರು ಜಾಗೃತರಾಗಬೇಕು. ಇಂದು ನಮ್ಮಲ್ಲಿ ಧಾರ್ಮಿಕ ಪ್ರವೃತ್ತಿ ಕಡಿಮೆಯಾಗುತ್ತಿದೆ. ನಮ್ಮಲ್ಲಿ ದೇವರಲ್ಲಿ ಭಕ್ತಿ-ಭಾವ ಕಡಿಮೆಯಾಗಿದೆ. ಇಂತಹ ಕಾರ್ಯಕ್ರಮ ಮಾಡುತ್ತಿರುವುದು ನಮ್ಮ ಹೆಣ್ಣುಮಕ್ಕಳ ರಕ್ಷಣೆಯಾಗಿದೆ ಎಂದು ಹೇಳಿದರು.

ಸಮಾಜದ ಅಧ್ಯಕ್ಷ ಫಕೀರಸಾ ಭಾಂಡಗೆ, ಗೌರವ ಕಾರ್ಯದರ್ಶಿ ವಿನೋದ ಸಿದ್ದಲಿಂಗ, ಉಪಾಧ್ಯಕ್ಷ ರಾಜು ಬದಿ, ಚಿಂತನ-ಮಂಥನ ರಾಜ್ಯಾಧ್ಯಕ್ಷ ಹನುಮಂತಸಾ ನಿರಂಜನ್, ಪ್ರಮುಖರಾದ ಕುಮಾರ ಬದಿ, ಪ್ರಕಾಶ್ ಕೊಡೆ, ಬಾಬು ಬಾಕಳೆ, ಅಶೋಕ್ ಬೇವಿನಕಟ್ಟಿ, ಶೋಭಾ ಭಾಂಡಗೆ, ಸರೋಜಬಾಯಿ ಟಿಕಂದಾರ್, ತರುಣ ಸಂಘದ ಸದಸ್ಯರು, ಮಹಿಳಾ ಮಂಡಳದ ಸದಸ್ಯರು ಹಾಗೂ ಸಮಾಜದ ಸಂಘ-ಸಂಸ್ಥೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

# ಪ್ರತಿಭಾವಂತ ವಿದ್ಯಾರ್ಥಿಯ ಶಿಕ್ಷಣಕ್ಕೆ ನೆರವಾಗಿ

**■ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ**

ಗುರುವಂದನೆ ಹಾಗೂ ಸ್ನೇಹ ಸಮ್ಮಿಲನ ಸಮಾರಂಭ ಆಯೋಜನೆಗಾಗಿ ಮಾಡುವ ಖರ್ಚಿನಲ್ಲಿ ಒಂದು ಭಾಗವನ್ನು ಆ ಶಾಲೆಯ ಪ್ರತಿಭಾವಂತ ವಿದ್ಯಾರ್ಥಿಯ ಶಿಕ್ಷಣಕ್ಕಾಗಿ ಮೀಸಲಿಡಬೇಕು.

ಸಹಾಯ ಯಾಚಿಸಿ ಬಂದವರಿಗೆ, ಆರ್ಥಿಕ ತೊಂದರೆಯಲ್ಲಿ ಓದು ಮುಂದುವರಿಸಲು ಆಗದವರಿಗೆ ಸಹಾಯ ಮಾಡಿದರೆ ಅದು ದೇವರಿಗೆ ಅರ್ಪಿಸಿದಂತೆ ಎಂದು ನಿವೃತ್ತ ಶಿಕ್ಷಕ ಕೆ.ಎಸ್. ಗಾರವಾಡ ಹಿರೇಮಠ ಹೇಳಿದರು.



ಇಲ್ಲಿನ ಟಿಟಿಡಿ ಕಲ್ಯಾಣ ಮಂಟಪದಲ್ಲಿ ಎಸ್.ಎಂ. ಭೂಮರಡ್ಡಿ ಪ್ರೌಢಶಾಲೆಯ 1999-2000ನೇ ಸಾಲಿನ ಎಸ್‌ಎಸ್‌ಎಲ್‌ಸಿ ಹಳೆಯ ವಿದ್ಯಾರ್ಥಿಗಳಿಂದ ನಡೆದ ಗುರುವಂದನೆ ಹಾಗೂ ಸ್ನೇಹ ಸಮ್ಮಿಲನ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಪುರಸಭೆ ವಿರೋಧ ಪಕ್ಷದ ನಾಯಕ ಮುರ್ತುಜಾ ಡಾಲಾಯತ, ಹಲವು ವರ್ಷಗಳ ಕನಸಾಗಿದ್ದ ಗುರುವಂದನೆ ಹಾಗೂ ಸ್ನೇಹ ಸಮ್ಮಿಲನ ಕಾರ್ಯಕ್ರಮವು ಸ್ನೇಹಿತರ ಸಂಘಟಿತ ಪ್ರಯತ್ನದಿಂದ ಈಗ ನನಸಾಗಿದೆ ಎಂದರು. ನಿವೃತ್ತ ಶಿಕ್ಷಕ ಸಿ.ಎಸ್. ವಾಲಿ ಹಾಗೂ ಶಿಕ್ಷಕ ಎಂ.ಎಸ್. ವಡ್ಡರ ಮಾತನಾಡಿದರು.

ಶಿಕ್ಷಕರಾದ ವಿ.ಎಸ್. ಕಾಳಗಿ, ವಿ.ಎಸ್. ನವಲಗುಂದ, ಎನ್.ಜಿ. ಶಿವಳ್ಳಿ, ಎಂ.ಬಿ. ಕುಲಕರ್ಣಿ, ಎಂ.ಎಚ್. ರಂಗಣ್ಣವರ, ಐ.ಎಸ್. ಹಾಸಿಮನವರ, ಕೆ.ಬಿ. ಜಾಗರಿ, ಎಂ.ಎ. ನಾಡಗೇರ, ಎ.ಎಸ್. ಸಿಂಹಾಸನದ, ಆರ್.ಕೆ. ಮಾಳೋದೆ ಹಾಗೂ ಬೋಧಕೇತರ ಸಿಬ್ಬಂದಿಗಳನ್ನು ಸನ್ಮಾನಿಸಿ, ಗುರುವಂದನೆ ಸಲ್ಲಿಸಲಾಯಿತು.

# ಹಬ್ಬಗಳು ನಮ್ಮ ಪರಂಪರೆಯ ಪ್ರತೀಕ

**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಹಬ್ಬಗಳು ಭಾರತೀಯ ಸಂಸ್ಕೃತಿ, ಪರಂಪರೆ ಉಳಿಸುವುದಷ್ಟೇ ಅಲ್ಲದೆ, ನಮ್ಮಲ್ಲಿನ ಮನಸ್ತಾಪ, ಕೆಟ್ಟ ಯೋಚನೆ ತೊಲಗಿಸಿ ಸಂತಸ, ನೆಮ್ಮದಿ, ಬಾಂಧವ್ಯ ಬೆಸೆಯುವ ಕೊಂಡಿಯಾಗುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ ಎಂದು ಜಿಲ್ಲಾ ಅರಣ್ಯ ಸಂರಕ್ಷಣಾಧಿಕಾರಿ ದೀಪಿಕಾ ಬಾಜಪೈ ಹೇಳಿದರು.



ಅವರು ಸೋಮವಾರ ಪಟ್ಟಣದ ಶ್ರೀ ಸೋಮೇಶ್ವರ ದೇವಸ್ಥಾನದಲ್ಲಿ ಸೋಮೇಶ್ವರ ಭಕ್ತರ ಸೇವಾ ಟ್ರಸ್ಟ್‌ನಿಂದ ಹಮ್ಮಿಕೊಳ್ಳಲಾಗಿದ್ದ ಗೌರಿ ಹುಣ್ಣಿಮೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

ಭಾರತೀಯ ಸಂಸ್ಕೃತಿಯಲ್ಲಿ ಹಬ್ಬ-ಹರಿದಿನಗಳಿಗೆ ಹೆಚ್ಚಿನ ಮಹತ್ವ ನೀಡಲಾಗಿದ್ದು, ಹಬ್ಬಗಳನ್ನು ವೈಶಿಷ್ಟ್ಯ ಮತ್ತು ಅರ್ಥಪೂರ್ಣವಾಗಿ ಆಚರಿಸಬೇಕು. ದೇವಸ್ಥಾನ ಕಮಿಟಿಯವರು ಈ ಸಾಂಪ್ರದಾಯಿಕ ಕಾರ್ಯಕ್ರಮ ಕೈಗೊಂಡಿರುವುದು ಅತ್ಯಂತ ಸಂತಸ ಮತ್ತು ಸ್ಮರಣೀಯ ಎಂದರು.

ಉಪನ್ಯಾಸ ನೀಡಿದ ಜ.ವೀರಗಂಗಾಧರ ಮಹಿಳಾ ಪ.ಪೂ ಕಾಲೇಜಿನ ಉಪನ್ಯಾಸಕರಾದ ಅಮೃತಾ ಗುಡಗೇರಿ, ಸಕ್ಕರೆಯಂತ ಸವಿ ನೆನಪು ಸದಾ ಉಳಿಯಲಿ. ತವರು ಮನೆ/ಗಂಡನ ಮನೆ ಸಂಪದ್ಭರಿತವಾಗಿ ಬೆಳಗಲಿ ಎಂದು ಹಾರೈಸುವ ಜಾನಪದ ಸೊಗಡಿನ ಸಕ್ಕರೆ ಗೊಂಬೆಯ ಗೌರಿ ಹುಣ್ಣಿಮೆ, ಹೆಂಗಳೆಯರ ಪಾಲಿನ ಸಂಭ್ರಮದ ಹಬ್ಬವಾಗಿದೆ ಎಂದರು.

ಸಾಂಸ್ಕೃತಿಕ ಚಿಂತಕರಾದ ಅನುಜಾ ಪೂಜಾರ, ತಾಲೂಕಾ ಕದಳಿ ಮಹಿಳಾ ವೇದಿಕೆಯ ಅಧ್ಯಕ್ಷೆ ನಿರ್ಮಲಾ ಅರಳಿ, ಅಧ್ಯಕ್ಷತೆ ವಹಿಸಿದ್ದ ಸೋಮೇಶ್ವರ ಭಕ್ತರ ಕಮಿಟಿ ಅಧ್ಯಕ್ಷ ಚಂಬಣ್ಣ ಬಾಳಿಕಾಯಿ ಮಾತನಾಡಿದರು.

ಅನ್ನಪೂರ್ಣ ಮಹಾಂತಶೆಟ್ಟರ, ಸೋಮಣ್ಣ ಪೂಜಾರ, ಬಸವೇಶ ಮಹಾಂತಶೆಟ್ಟರ, ದೇವಣ್ಣ ಬಳಿಗಾರ, ಸುರೇಶ ರಾಚನಾಯ್ಕರ, ಬಸವರಾಜ ಮೆಣಸಿನಕಾಯಿ, ಗೋಪಾಲ ನಾಯಕ, ಅಶ್ವಿನಿ ಅಂಕಲಕೋಟಿ, ಗೀತಾದೇವಿ ಮಾನ್ವಿ, ಸುಮಾ ಚೋಟಗಲ್ ಇದ್ದರು. ಸ್ನೇಹಾ ಹೊಟ್ಟಿ, ಜಿ.ಎಸ್. ಗುಡಗೇರಿ, ಸೋಮಶೇಖರ ಕೆರಿಮನಿ ನಿರೂಪಿಸಿದರು.

# ಸೂಡಿ ಧಾರ್ಮಿಕ ಆಚರಣೆಯ ಕೇಂದ್ರ ಬಿಂದು



**■ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ**

ಚಿದಂಬರೇಶ್ವರರ 53ನೇ ಜನ್ಮದಿನೋತ್ಸವದ ಪ್ರಯುಕ್ತ ಲೋಕ ಕಲ್ಯಾಣಾರ್ಥವಾಗಿ ಸೂಡಿಯ ಯಾಜ್ಞವಲ್ಕ್ಯ ಆಶ್ರಮ ಚಿದಂಬರೇಶ್ವರ ದೇವಸ್ಥಾನದಲ್ಲಿ ಮಂಗಳವಾರ ಅತಿರುದ್ರ ಮಹಾಯಾಗ ನೆರವೇರಿತು.

ಪ್ರಧಾನಾಚಾರ್ಯ ವಿದ್ವಾನ್ ಶಂಕರಭಟ್ಟ ಜೋಶಿಯವರು ಧರ್ಮ ಧ್ವಜಾರೋಹಣ ಮಾಡುವ ಮೂಲಕ ಧಾರ್ಮಿಕ ಕಾರ್ಯಕ್ರಮಗಳಿಗೆ ವಿಧ್ಯುಕ್ತವಾಗಿ ಚಾಲನೆ ನೀಡಿದರು.

ಈ ವೇಳೆ ಶಂಕರಭಟ್ಟ ಜೋಶಿ ಮಾತನಾಡಿ, ಸೂಡಿ ಕ್ಷೇತ್ರವು ಧಾರ್ಮಿಕ ಆಚರಣೆಯಲ್ಲಿ ಕೇಂದ್ರ ಬಿಂದುವಾಗಿದೆ. ಈ ಹಿನ್ನೆಲೆಯಲ್ಲಿ ಚಿದಂಬರೇಶ್ವರ ದೇವಸ್ಥಾನವು ಶಕ್ತಿ ಕೇಂದ್ರವಾಗಿದೆ. ಇಂತಹ ಪುಣ್ಯ ಕ್ಷೇತ್ರದಲ್ಲಿ ಪ್ರಥಮವಾಗಿ ಅತಿರುದ್ರ ಮಹಾಯಾಗ ನಡೆಯುತ್ತಿದ್ದು, ಇದರಿಂದ ಲೋಕಕ್ಕೇ ಶ್ರೇಯಸ್ಸು ಲಭಿಸಲಿದೆ.

ರಾಷ್ಟ್ರದಲ್ಲಿ ಪ್ರವಾಹ, ಭೀಕರ ಕಾಯಿಲೆ ಮುಂತಾದ ತೊಂದರೆಗಳಿಂದ ನಾವು ಬಹಳ ಕಷ್ಟ ಪಡುತ್ತಿದ್ದೇವೆ.

ಈ ಎಲ್ಲಾ ತೊಂದರೆಗಳಿಗೆ ಭಗವಂತನ ಆರಾಧನೆಯೇ ಪರಮಶ್ರೇಷ್ಠ. ಮನುಕುಲದ ಹಿತಕ್ಕಾಗಿ ಇಂತಹ ಕಾರ್ಯಗಳು ಮನಸ್ಸಿಗೆ ನೆಮ್ಮದಿ ಶಾಂತಿ ತರುತ್ತದೆ ಎಂದರು.

ಸಿ.ಆರ್. ಜೋಶಿ ಮಾತನಾಡಿ, ಯಾರು ದೇವರಿಗಾಗಿ ಸತ್ಯ-ನಿಷ್ಠೆಯಲ್ಲಿ ತೊಡಗುವರೊ, ದೇವರಿಗಾಗಿ ಹಂಬಲಿಸುವರೋ, ಅಂಥವರಿಗೆ ದೇವರು ಸಾಕ್ಷಾತ್ಕಾರವಾಗುವದರಲ್ಲಿ ಅನುಮಾನವಿಲ್ಲ ಎಂದರು.

ಜಿ.ಆರ್. ಜೋಶಿ ಮಾತನಾಡಿ, ಭಾರತೀಯ ಸಂಸ್ಕೃತಿ ಹಾಗೂ ಧರ್ಮಾಚರಣೆ ಅತ್ಯಂತ ಸನಾತನವಾಗಿದ್ದು, ಭಾರತೀಯ ಪರಂಪರೆಯನ್ನು ವಿದೇಶದವರೂ ಅನುಸರಿಸುತ್ತಿದ್ದಾರೆ ಎಂದರು.

ಈ ವೇಳೆ ಭುಜಂಗಭಟ್ಟ ಜೋಶಿ, ಕಿರಣ ಜೋಶಿ, ವೆಂಕಟೇಶ ಜೋಶಿ, ವಿನಾಯಕಭಟ್ಟ ನಾಡಗೇರ, ಕಿಶನ ಜೋಶಿ, ವಸಂತ ರಾಜಪುರೋಹಿತ, ರಾಮಭಟ್ಟ ಜೋಶಿ, ನಟರಾಜ ಜೋಶಿ, ಮನೋಜಶರ್ಮಾ ಹಾಗೂ ಶಿಷ್ಯವರ್ಗ, ವ್ಯಾಸನಾರಾಯಣ ಹಾಗೂ ಶಿಷ್ಯವರ್ಗ ಸೇರಿದಂತೆ ಸಕಲ ಸದ್ಭಕ್ತರು ಭಾಗವಹಿಸಿದ್ದರು.

# ಮದ್ಯವರ್ಜನ ಶಿಬಿರ ಹೊಸ ಜೀವನಕ್ಕೆ ನಾಂದಿ

**■ವಿಜಯಸಾಕ್ಷಿ ಸುದ್ದಿ, ಗದಗ**

ವ್ಯಸನಮುಕ್ತರಾಗುವ ಕನಸನ್ನು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ನನಸು ಮಾಡುತ್ತಿದೆ ಎಂದು ಸದ್ಗುರು ಮುಕ್ತಣ್ಣೇಶ್ವರ ಮಠದ ಪೂಜ್ಯಶ್ರೀ ಶಂಕರಾನಂದ ಸ್ವಾಮೀಜಿಗಳು ಹೇಳಿದರು.

ಅವರು ಹುಯಿಲಗೋಳ ರಸ್ತೆಯಲ್ಲಿರುವ ವೆಂಕಟೇಶ್ವರ ಕಲ್ಯಾಣ ಮಂಟಪದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಅಡಿಯಲ್ಲಿ ತಾಲೂಕಿನ ಹೊಂಬಳ ವಲಯದಲ್ಲಿ 1762ನೇ 'ಮದ್ಯವರ್ಜನ ಶಿಬಿರ' ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದರು.



ಕಾರ್ಯಕ್ರಮವನ್ನು ಉದ್ಘಾಟಿಸಿದ ಅಖಿಲ ಕರ್ನಾಟಕ ಜಿಲ್ಲಾ ಜನಜಾಗೃತಿ ವೇದಿಕೆಯ ಅಧ್ಯಕ್ಷ ಶಿವಾನಂದ ಬೆಂತೂರ ಮಾತನಾಡಿ, ವ್ಯಸನಮುಕ್ತ ಸಮಾಜ ನಿರ್ಮಿಸುವ ಉದ್ದೇಶದಿಂದ ಧರ್ಮಾಧಿಕಾರಿ ಡಾ. ಡಿ.ವೀರೇಂದ್ರ ಹೆಗ್ಗಡೆಯವರು ಜನಜಾಗೃತಿ ವೇದಿಕೆಯಿಂದ ಮದ್ಯವರ್ಜನ ಶಿಬಿರದ ಮೂಲಕ ಹೊಸ ಜೀವನವನ್ನು ನಡೆಸಲು ದಾರಿದೀಪವಾಗಿದೆ ಎಂದರು.

ಜಿಲ್ಲಾ ಯೋಜನಾ ನಿರ್ದೇಶಕರಾದ ಯೋಗೇಶ ಎ. ಮಾತನಾಡಿ, ಡಾ.ಡಿ. ವೀರೇಂದ್ರ ಹೆಗ್ಗಡೆಯವರು 1992ರಲ್ಲಿ ದುಶ್ಚಟ ಮುಕ್ತ ಸಮಾಜ ನಿರ್ಮಾಣಕ್ಕಾಗಿ ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆಯನ್ನು ಬೆಳ್ತಂಗಡಿಯಲ್ಲಿ ಪ್ರಾರಂಭಿಸಿದರು. ಜನಜಾಗೃತಿ ವೇದಿಕೆಯಿಂದ ಮದ್ಯವರ್ಜನ ಶಿಬಿರಗಳ ಮೂಲಕ 2847 ಜನ ಮದ್ಯವ್ಯಸನಿಗಳನ್ನು ವ್ಯಸನ ಮುಕ್ತರನ್ನಾಗಿ ಮಾಡಲಾಗಿದೆ ಎಂದರು.

ಗದಗ ತಾಲೂಕಾ ಯೋಜನಾಧಿಕಾರಿ ಸುರೇಂದ್ರ ನಾಯಕ ಮಾತನಾಡಿ, ಕುಡಿತದ ಚಟದಿಂದ ಹಲವು ಕುಟುಂಬಗಳು ಹಾಳಾಗಿವೆ. ಒಂದು ದುಶ್ಚಟ ಇಡೀ ಕುಟುಂಬದ ವಿನಾಶಕ್ಕೆ ಕಾರಣವಾಗುತ್ತದೆ. ವೀರೇಂದ್ರ ಹೆಗ್ಗಡೆಯವರು ವ್ಯಸನಮುಕ್ತ ಸಮಾಜದ ಗುರಿ ಹೊಂದಿದ್ದು, ಈ ನಿಟ್ಟಿನಲ್ಲಿ ಉತ್ತಮ ಸಮಾಜದ ನಿರ್ಮಾಣದಲ್ಲಿ ಇದು 1762ನೇ ಶಿಬಿರವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಚನ್ನಬಸಪ್ಪ ಹೂಗಾರ, ನೀಲವ್ವ ಕಡಿಯುವರ, ಗಂಗಾಧರ ಕೋಟಿ, ಮಹೇಶಗೌಡ ಪಾಟೀಲ, ಗಣೇಶಸಿಂಗ್ ಬ್ಯಾಳಿ, ರಮೇಶ ಬೆಳಗಟ್ಟಿ ಸೇರಿದಂತೆ ಮೇಲ್ವಿಚಾರಕರು ಮತ್ತು ಸೇವಾ ಪ್ರತಿನಿಧಿಗಳು ಉಪಸ್ಥಿತರಿದ್ದರು.

# ಬೆಳಗಾವಿಯಲ್ಲಿ ಪ್ರಾಯೋಗಿಕ ಪ್ರದರ್ಶನ ಕಾರ್ಯಾಗಾರ

**■ವಿಜಯಸಾಕ್ಷಿ ಸುದ್ದಿ, ಗದಗ**

ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ 2023-24ನೇ ಸಾಲಿಗೆ ವಿವಿಧ ಕಲಾ ತಂಡಗಳಿಂದ ರಾಷ್ಟ್ರೀಯ ಕಾರ್ಯಕ್ರಮಗಳ ಕುರಿತು ಅತಿ ಹಿಂದುಳಿದ ಗ್ರಾಮಗಳಲ್ಲಿ ಸಾರ್ವಜನಿಕರಿಗೆ ಅರಿವು ಮೂಡಿಸಲು ಅರ್ಹ ತಂಡಗಳ ಬೆಳಗಾವಿ ವಿಭಾಗ ಮಟ್ಟದ ಕಲಾತಂಡಗಳ ತರಬೇತಿ ಜರುಗಲಿದೆ. ಗದಗ ಜಿಲ್ಲೆಯಲ್ಲಿರುವ ಅರ್ಹ ಜಾನಪದ ಕಲಾ ತಂಡಗಳು ನವೆಂಬರ್ 29 ರಿಂದ ಡಿಸೆಂಬರ್ 1 ರವರೆಗೆ ಪೌಂಡ್ರಿ ಕ್ಲಸ್ಟರ್ ಉದ್ಯಮ ಭಾಗ ಬೆಳಗಾವಿಯಲ್ಲಿ ಹಮ್ಮಿಕೊಳ್ಳಲಾದ ಪ್ರಾಯೋಗಿಕ ಪ್ರದರ್ಶನ ಕಾರ್ಯಾಗಾರಕ್ಕೆ ಹಾಜರಾಗಲು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನಿಧನ ವಾರ್ತೆ

**ಶಿವಪ್ಪ ಮಣಕವಾಡ**



ಲಕ್ಕುಂಡಿ: ಇಲ್ಲಿಯ ಮಾರುತಿ ನಗರದ ನಿವಾಸಿ ಶಿವಪ್ಪ ಯಲ್ಲಪ್ಪ ಮಣಕವಾಡ (65) ಸೋಮವಾರ ನಿಧನರಾದರು. ಮೃತರು ಪುತ್ರ, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧು-ಬಳಗ ಅಗಲಿದ್ದಾರೆ.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka